# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

**BRAHMASHRI NARAYANA GURU ADHYAYANA PEETHA**
ದೂರವಾಣಿ/Phone: 9886746907, Email: narayanagurupeethamu@gmail.com


---

**ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಕಾರ್ಯಚಟುವಟಿಕೆಗಳ ವರದಿ:**

**1. 'ಗುರುನಡೆ ಗ್ರಾಮದೆಡೆ' ಕಾರ್ಯಕ್ರಮದ ಚಿತ್ರಗಳು ಹಾಗೂ ಪತ್ರಿಕಾ ತುಣುಕುಗಳು**

**<u>ಗುರುನಡೆ–1:</u>**
**ಕೊಣಾಜೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ** **22.03.2021**

---

**22.03.2021– ಗುರುನಡೆ ಗ್ರಾಮದೆಡೆ ಉದ್ಘಾಟನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆ**



**22.03.2021– ಮಾನ್ಯ ಕುಲಪತಿಯವರಿಂದ ಉದ್ಘಾಟನಾ ಭಾಷಣ**

**22.03.2021–ಪೀಠದ ನಿರ್ದೇಶಕರಾದ ಡಾ. ಗಣೇಶ್ ಅಮೀನ್ ಸಂಕಮಾರ್ ಅವರಿಂದ ಪ್ರಾಸ್ತಾವಿಕ ನುಡಿ**



**22.03.2021– ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕೊಣಾಜೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳು**

**ಗುರುನಡೆ–2 ಗುರು ನಿನಾದ**

**‘ನಿನಾದ’ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ, ಪಾವಂಜೆ** **27.03.2021**

**27.03.2021 ಕಾರ್ಯಕ್ರಮ ಉದ್ಘಾಟಿಸುತ್ತಿರುವ ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣಗುರು ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ದಯಕರ ಕುಳಾಯಿ**

**27.03.2021 ಅತಿಥಿ ಭಾಷಣದಲ್ಲಿ ಓರಿಯಂಟಲ್ ಇನ್ಶೂರೆನ್ಸ್ ಕಂಪೆನಿಯ ಪ್ರಬಂಧಕರಾದ ಶ್ರೀ ಯಾದವ ದೇವಾಡಿಗ**

**27.03.2021– ವಿಶೇಷ ಉಪನ್ಯಾಸ ನೀಡಿದ ಶ್ರೀಮತಿ ಪಲ್ಲವಿ ರಾಜೇಶ್ ಅವರಿಂದ ವಿದ್ಯಾರ್ಥಿಗಳೊಂದಿಗೆ ಸಂವಾದ**



ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮಂಗಳಗಂಗೋತ್ರಿ – ೫೭೪ ೧೯೯

ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ
ಪಾವಂಜೆ

ದಿನಾಂಕ :
27–3–2021 ಶನಿವಾರ
ಬೆಳಿಗ್ಗೆ 10–30ರಿಂದ
ಸ್ಥಳ :
ನಿನಾದ ರಂಗಮಂದಿರ, ಪಾವಂಜೆ

ತಮಗೆಲ್ಲರಿಗೂ ಆತ್ಮೀಯ ಸ್ವಾಗತ

ಕಾರ್ಯಕ್ರಮ ಕೋವಿಡ್ ನಿಯಮದನ್ವಯ ನಡೆಯುತ್ತದೆ.

ಗುರು ನಡೆ ಗ್ರಾಮದೆಡೆ

ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನ–2021

ನಡೆ–2 : ಗುರು ನಿನಾದ
ಎಳ್ಳಿನೊಳಗಿನ ಎಣ್ಣೆ – ಅಧ್ಯಾತ್ಮ ಚಿಂತನೆ

ಉದ್ಘಾಟಕರು : ಧರ್ಮದರ್ಶಿ ಹರಿಕೃಷ್ಣ ಪುನರೂರು, ಮಾಜಿ ರಾಜ್ಯಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಅಧ್ಯಕ್ಷತೆ : ಶ್ರೀ ಕಡಂಬೋಡಿ ಮಹಾಬಲ ಪೂಜಾರಿ, ಉದ್ಯಮಿ
ನುಡಿ : ಶ್ರೀಮತಿ ಪಲ್ಲವಿ ರಾಜೇಶ್, ಆಂಗ್ಲ ಉಪನ್ಯಾಸಕಿ, ಗೋವಿಂದದಾಸ ಪದವಿಪೂರ್ವ ಕಾಲೇಜು, ಸುರತ್ಕಲ್
ಮುಖ್ಯ ಅತಿಥಿಗಳು : ಲಯನ್ ಯಾದವ ದೇವಾಡಿಗ, ಹಿರಿಯ ಶಾಖಾ ಪ್ರಬಂಧಕರು, ಓರಿಯೆಂಟಲ್ ಇನ್ಸೂರೆನ್ಸ್ ಕಂಪೆನಿ, ಸುರತ್ಕಲ್
ಶ್ರೀ ದಯಾಕರ ಪಿ. ಸುವರ್ಣ, ಮ್ಯಾನೇಜಿಂಗ್ ಟ್ರಸ್ಟಿ, ಬ್ರಹ್ಮಶ್ರೀ ನಾರಾಯಣಗುರು ಶಿಕ್ಷಣ ಟ್ರಸ್ಟ್, ಕಾಟಿಪಳ್ಳ
ಉಪಸ್ಥಿತಿ : ಶ್ರೀಮತಿ ಕುಸುಮ ಕಡಂಬೋಡಿ ಮಹಾಬಲ ಪೂಜಾರಿ
ಲಯನ್ ಯಶೋಧರ ಸಾಲ್ಯಾನ್, ಹಳೆಯಂಗಡಿ

ಸಂಯೋಜಕರು
ಮತ್ತು ಸದಸ್ಯರು
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ

ಸಾಕ್ಷಿ : ಶ್ರೀ ನಾರಾಯಣಗುರು ಪದವಿಪೂರ್ವ ಕಾಲೇಜು, ಕಾಟಿಪಳ್ಳ ಇಲ್ಲಿನ ವಿದ್ಯಾರ್ಥಿಗಳು

**27.03.2021– ಗುರುನಡೆ ಗ್ರಾಮದೆಡೆ–2 ಕಾರ್ಯಕ್ರಮದ ಆಹ್ವಾನ ಪತ್ರಿಕೆ**

# ‘ನಾರಾಯಣ ಗುರು ವಿಶ್ವಮಾನ್ಯರು’

ಪ್ರಜಾವಾಣಿ ವಾರ್ತೆ



ಮೂಲ್ಕಿ ಹೋಬಳಿಯ ಪಾವಂಜೆಯ ನಿನಾದ ರಂಗಮಂದಿರದಲ್ಲಿ ವಿವಿಧ ಸಂಘ ಸಂಸ್ಥೆಗಳಿಂದ ಶನಿವಾರ ನಡೆದ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಉದ್ಘಾಟಿಸಿದರು.

ಮೂಲ್ಕಿ: ‘ನಾರಾಯಣ ಗುರುಗಳ ತತ್ವ ಆದರ್ಶ ಸದಾಕಾಲ ಪ್ರಸ್ತುತ. ಜಾತಿ, ಮತ, ಪಂಥ ಭೇದವಿಲ್ಲದೆ ವಿಶ್ವಮಾನವ ತತ್ವವನ್ನು ಸಾರಿದ ಮಹಾಮಹಿಮ ಅವರು’ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಅಭಿಪ್ರಾಯಪಟ್ಟರು.

ಮೂಲ್ಕಿ ಬಳಿಯ ಪಾವಂಜೆಯ ನಿನಾದ ರಂಗಮಂದಿರದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಮತ್ತು ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಸಹಭಾಗಿತ್ವದಲ್ಲಿ ಶನಿವಾರ ನಡೆದ ವಿದ್ಯಾರ್ಥಿಗಳಿಗಾಗಿ ‘ಗುರು ನಡೆ ಗ್ರಾಮದೆಡೆ’ ಕಾರ್ಯಕ್ರಮದಡಿಯಲ್ಲಿ ‘ಗುರುನಿನಾದ ಎಳ್ಳಿನೊಳಗಿನ ಎಣ್ಣೆ ಅಧ್ಯಾತ್ಮ ಚಿಂತನಾ’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸುರತ್ಕಲ್ ಗೋವಿಂದದಾಸ ಪದವಿಪೂರ್ವ ಕಾಲೇಜು ಉಪನ್ಯಾಸಕಿ ಪಲ್ಲವಿ ರಾಜೇಶ್ ಮಾತನಾಡಿದರು.

ಒರಿಯಂಟಲ್ ಇನ್ಶೂರೆನ್ಸ್ ಹಿರಿಯ ಶಾಖಾ ಪ್ರಬಂಧಕ ಯಾದವ ದೇವಾಡಿಗ ನಿನಾದ ಸಂಸ್ಮರಣೆಯನ್ನು ನಡೆಸಿದರು.

ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆಯನ್ನು ವಹಿಸಿದ್ದರು.

> ನಾರಾಯಣ ಗುರುಗಳು ಒಂದು ಜಾತಿಗೆ ಸೀಮಿತರಲ್ಲ. ಅವರು ವಿಶ್ವಮಾನ್ಯರು. ಅವರ ತತ್ವ ತಿಳಿದು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿ ಬೆಳೆಯಬೇಕು.
>
> **ಹರಿಕೃಷ್ಣ ಪುನರೂರು**
> ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ

ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಮುಖ್ಯಸ್ಥ ದಯಾಕರ ಪಿ. ಸುವರ್ಣ, ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣಗುರು ಪದವಿಪೂರ್ವ ಕಾಲೇಜು ಸಂಚಾಲಕ ಅರುಣ್ ಕುಮಾರ್, ಪ್ರಾಂಶುಪಾಲ ಉಮೇಶ್ ಕರ್ಕೇರ, ಕಡಂಬೋಡಿ ಕುಸುಮಾ ಮಹಾಬಲ ಪೂಜಾರಿ, ಅನುರಾಧ ಕಡಂಬೋಡಿ, ಉದ್ಯಮಿ ಯಶೋಧರ ಸಾಲ್ಯಾನ್, ಜಯಂತಿ ಸಂಕಮಾರ್, ಹಳೆಯಂಗಡಿ ಬಿಲ್ಲವ ಸಂಘದ ಅಧ್ಯಕ್ಷ ಚಂದ್ರಶೇಖರ ನಾನಿಲ್, ವಕೀಲ ಮಧುಕರ ಅಮೀನ್, ಧರ್ಮಪಾಲ್ ಎಂ.ಟಿ, ಮೂಲ್ಕಿ ಚಂದ್ರಶೇಖರ ಸುವರ್ಣ ಇದ್ದರು.

ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಅನು ಸಂಕಮಾರ್ ಮತ್ತು ಭವ ಸಂಕಮಾರ್ ನಿರೂಪಿಸಿಸಿದರು.

ಪ್ರಜಾವಾಣಿ. 28.03.2021

# ‘ನಾರಾಯಣಗುರುಗಳ ತತ್ವಾದರ್ಶ ಮಾದರಿ’



ಕಾರ್ಯಕ್ರಮವನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ಉದ್ಘಾಟಿಸಿದರು.

**ಪಾವಂಜೆ, ಮಾ. 27:** ನಾರಾಯಣ ಗುರುಗಳ ತತ್ವಾದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ನಮ್ರತನ ದೊಂದಿಗೆ, ಸಮಾಜಮುಖಿ ಚಿಂತನೆಗೆ ಪ್ರೇರಣೆಯಾಗುತ್ತದೆ. ನಾವೇ ಶ್ರೇಷ್ಠರು ಎನ್ನುವ ಮೊದಲು ನಾವೆಷ್ಟು ಅರ್ಹರು ಎಂಬುದನ್ನು ಜಗತ್ತಿನಲ್ಲಿ ಸಾರಬೇಕು ಎಂದು ಕಸಾಪ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಹರಿಕೃಷ್ಣ ಪುನರೂರು ಹೇಳಿದರು.

ಪಾವಂಜೆಯ ನಿನಾದ ರಂಗ ಮಂದಿರದಲ್ಲಿ ಮಾ. 27ರಂದು ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಮತ್ತು ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಸಹಭಾಗಿತ್ವದಲ್ಲಿ ವಿದ್ಯಾರ್ಥಿಗಳಿಗಾಗಿ ನಡೆದ ಗುರುನಡೆ ಗ್ರಾಮದೆಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುರು ನಿನಾದ ಎಳ್ಳಿನೊಳಗಿನ ಎಣ್ಣೆ ಆಧ್ಯಾತ್ಮ ಚಿಂತನ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸುರತ್ಕಲ್ ಗೋವಿಂದ ದಾಸ ಪ.ಪೂ. ಕಾಲೇಜಿನ ಉಪನ್ಯಾಸಕಿ ಪಲ್ಲವಿ ರಾಜೇಶ್ ಮಾತನಾಡಿದರು.

ಒರಿಯಂಟಲ್ ಇನ್ಶೂರೆನ್ಸ್ ಹಿರಿಯ ಶಾಖಾ ಪ್ರಬಂಧಕ ಯಾದವ ದೇವಾಡಿಗ, ನಿನಾದ ಸಂಸ್ಮರಣೆಯನ್ನು ನಡೆಸಿದರು. ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.

ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಮುಖ್ಯಸ್ಥ ದಯಾಕರ ಪಿ. ಸುವರ್ಣ, ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಪ.ಪೂ. ಕಾಲೇಜು ಸಂಚಾಲಕ ಅರುಣ್ ಕುಮಾರ್, ಪ್ರಾಂಶುಪಾಲ ಉಮೇಶ್ ಕರ್ಕೇರ, ಕಡಂಬೋಡಿ ಕುಸುಮಾ ಮಹಾಬಲ ಪೂಜಾರಿ, ಅನುರಾಧಾ ಕಡಂಬೋಡಿ, ಹಳೆಯಂಗಡಿ ಲಯನ್ಸ್ ಕ್ಲಬ್‌ನ ಮಾಜಿ ಅಧ್ಯಕ್ಷ ಯಶೋಧರ ಸಾಲ್ಯಾನ್, ಮಂಗಳೂರು ವಿ.ವಿ. ಬ್ರಹ್ಮಶ್ರೀ ಜಯಂತಿ ಸಂಕಮಾರ್, ಹಳೆಯಂಗಡಿ ಬಿಲ್ಲವ ಸಂಘದ ಅಧ್ಯಕ್ಷ ಚಂದ್ರಶೇಖರ ನಾನಿಲ್, ವಕೀಲ ಮಧುಕರ ಅಮೀನ್, ಧರ್ಮಪಾಲ್ ಎಂ.ಟಿ., ಮೂಲ್ಕಿ ಚಂದ್ರ ಶೇಖರ ಸುವರ್ಣ ಉಪಸ್ಥಿತರಿದ್ದರು.

ಮಂಗಳೂರು ವಿಶ್ವ ವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ, ಪ್ರಸ್ತಾವನೆಗೈದರು. ಅನು ಸಂಕಮಾರ್, ಭವ ಸಂಕಮಾರ್ ನಿರೂಪಿಸಿ ವಂದಿಸಿದರು. ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಪ.ಪೂ. ಕಾಲೇಜು ವಿದ್ಯಾರ್ಥಿಗಳು ವಿಚಾರ ಸಂಕಿರ್ಣದಲ್ಲಿ ಭಾಗವಹಿಸಿದ್ದರು.

ಉದಯವಾಣಿ - 28-03-2021

# ಪಾವಂಜೆಯಲ್ಲಿ ಅಧ್ಯಾತ್ಮ ಚಿಂತನಾ ಕಾರ್ಯಕ್ರಮ



**ವಿಕ ಸುದ್ದಿಲೋಕ** ಕಿನ್ನಿಗೋಳಿ

ನಾರಾಯಣ ಗುರುಗಳ ತತ್ವ ಆದರ್ಶ ಸದಾ ಪ್ರಸ್ತುತ. ಅವರು ಜಾತಿ ಮತ ಪಂಥ ಭೇದ ವಿಲ್ಲದೆ ವಿಶ್ವಮಾನವ ತತ್ವವನ್ನು ಸಾರಿದ ಮಹಾ ಮಹಿಮರಾಗಿದ್ದವರು ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು.

ಪಾವಂಜೆಯ ನಿನಾದ ರಂಗ ಮಂದಿರದಲ್ಲಿ ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಮತ್ತು ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಸಹ ಭಾಗಿತ್ವದಲ್ಲಿ ಶನಿವಾರ ಗುರುನಡೆ ಗ್ರಾಮದೆಡೆ ಕಾರ್ಯಕ್ರಮದಲ್ಲಿ ಗುರು ನಿನಾದ ಎಳ್ಳಿ ನೊಳಗಿನ ಎಣ್ಣೆ ಅಧ್ಯಾತ್ಮ ಚಿಂತನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ ಸುರತ್ಕಲ್ ಗೋವಿಂದ ದಾಸ ಪದವಿ ಪೂರ್ವ ಕಾಲೇಜು ಉಪನ್ಯಾಸಕಿ ಪಲ್ಲವಿ ರಾಜೇಶ್ ಮಾತನಾಡಿದರು. 28-03-21

[illegible] ಪ್ರಬಂಧಕ ಯಾದವ ದೇವಾಡಿಗ ನಿನಾದ ಸಂಸ್ಮರಣೆ ನಡೆಸಿದರು. ಉದ್ಯಮಿ ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಮುಖ್ಯಸ್ಥ ದಯಾಕರ ಪಿ. ಸುವರ್ಣ, ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಪದವಿ ಪೂರ್ವ ಕಾಲೇಜು ಸಂಚಾಲಕ ಅರುಣ್ ಕುಮಾರ್, ಪ್ರಿನ್ಸಿಪಾಲ್ ಉಮೇಶ್ ಕರ್ಕೇರಾ, ಕಡಂಬೋಡಿ ಕುಸುಮಾ ಮಹಾ ಬಲ ಪೂಜಾರಿ, ಅನುರಾಧ ಕಡಂಬೋಡಿ, ಉದ್ಯಮಿ ಯಶೋಧರ ಸಾಲ್ಯಾನ್, ಜಯಂತಿ ಸಂಕಮಾರ್, ಹಳೆಯಂಗಡಿ ಬಿಲ್ಲವ ಸಂಘದ ಅಧ್ಯಕ್ಷ ಚಂದ್ರ ಶೇಖರ ನಾನಿಲ್, ವಕೀಲ ಮಧುಕರ ಅಮೀನ್, ಧರ್ಮರಾಜ್ ಎಂ.ಟಿ, ಮೂಲ್ಕಿ ಚಂದ್ರಶೇಖರ ಸುವರ್ಣ ಉಪಸ್ಥಿತರಿದ್ದರು.

ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಅನು–ಭವ [illegible]

 **05.04.2021**




**05.04.2021– ಗುರುನಡೆ ಗ್ರಾಮದೆಡೆ–3 ಕಾರ್ಯಕ್ರಮದ ಆಹ್ವಾನ ಪತ್ರಿಕೆ**

**05.04.2021_ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ವಾಸುದೇವ ಬೆಳ್ಳೆಯವರಿಂದ ಕಾರ್ಯಕ್ರಮದ ಉದ್ಘಾಟನೆ.**

**05.04.2021_ಕಲಾವಿದ, ರಾಜ್ಯಪ್ರಶಸ್ತಿ ವಿಜೇತ, ನಾರಾಯಣ ಗುರುಗಳ ಚಲನಚಿತ್ರ ನಿರ್ದೇಶಕ ಮುಲ್ಕಿ ಸುವರ್ಣ ಆರ್ಟ್ಸ್‌ನ ಶ್ರೀ ಚಂದ್ರಶೇಖರ ಸುವರ್ಣ ಇವರಿಂದ ಉಪನ್ಯಾಸ.**

**05.04.2021– ಗುರುನಡೆ ಗ್ರಾಮದೆಡೆ–3 ಕಾರ್ಯಕ್ರಮದ ಪತ್ರಿಕಾ ತುಣುಕುಗಳು**

# ನಾರಾಯಣಗುರು ತತ್ವ ಸಾರ್ವಕಾಲಿಕ

ವಿಜಯವಾಣಿ - 6-4-2021



ಮೂಲ್ಕಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ವತಿಯಿಂದ ನಾರಾಯಣ ಗುರು ಶಿಕ್ಷಣ ಸಂದೇಶ ಅಭಿಯಾನ 2021ರ ಗುರು ನಡೆ ಗ್ರಾಮದೆಡೆ ಕಾರ್ಯಕ್ರಮವನ್ನು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮತ್ತು ಮೂಲ್ಕಿ ರೋಟರಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಉದ್ಘಾಟಿಸಿದರು.

■ ವಿಜಯವಾಣಿ ಸುದ್ದಿಜಾಲ ಮೂಲ್ಕಿ

ನಾರಾಯಣ ಗುರುಗಳು ಅಂದು ಅರವೀಪುರದಲ್ಲಿ ಸ್ಥಾಪಿಸಿದ ಶಿವಲಿಂಗವು ಬಡ ಜನರ ಹೃದಯ ದೇಗುಲದಲ್ಲಿ ಅರಳಿದ ಶಿವ ತತ್ವವಾಗಿದ್ದು, ಅವರ ತತ್ವ ಆದರ್ಶಗಳು ಸಾರ್ವಕಾಲಿಕವಾಗಿ ಪ್ರಸ್ತುತ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಮೂಲ್ಕಿ ಚಂದ್ರಶೇಖರ ಸುವರ್ಣ ಹೇಳಿದರು.

ಮೂಲ್ಕಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸೋಮವಾರ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ವತಿಯಿಂದ ನಾರಾಯಣ ಗುರು ಶಿಕ್ಷಣ ಸಂದೇಶ ಅಭಿಯಾನ 2021ರ 'ಗುರು ನಡೆ ಗ್ರಾಮದೆಡೆ' ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

**» ಮೂಲ್ಕಿ ಚಂದ್ರಶೇಖರ ಸುವರ್ಣ ಅಭಿಪ್ರಾಯ**

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮತ್ತು ಮೂಲ್ಕಿ ರೋಟರಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಉದ್ಘಾಟಿಸಿ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರುಗಳು ದೀನ ವರ್ಗದ ಧ್ವನಿಯಾಗಿ ಜನರನ್ನು ಸಂಘಟನೆ ಹಾಗೂ ವಿದ್ಯಾರ್ಜನೆ ಮೂಲಕ ಬೆಳೆಸಿದ ಜಗತ್ತಿನ ಮಹಾನ್ ಚೇತನ ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯ ಗ್ರಾಮೀಣ ವಿದ್ಯಾರ್ಥಿಗಳ ಕಡೆಗೆ ಹೋಗುವ ಮೂಲಕ ಉತ್ತಮ ಸಂಸ್ಕಾರ ಹಾಗೂ ಉನ್ನತ ಶಿಕ್ಷಣ ಯೋಜನೆಗಳನ್ನು ಪರಿಚಯಿಸುವ ಉದ್ದೇಶ ಹೊಂದಿದೆ. ನಾರಾಯಣ ಗುರುಗಳ ಸಂದೇಶ ಎಲ್ಲರನ್ನೂ ತಲುಪುವಂತಾಗಬೇಕು.

**ಡಾ.ಗಣೇಶ್ ಅಮೀನ್ ಸಂಕಮಾರ್**
ಮಂಗಳೂರು ವಿವಿ ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ

ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ ಅಧ್ಯಕ್ಷತೆ ವಹಿಸಿದ್ದರು. ಮೂಲ್ಕಿ ನಪಂ ಸದಸ್ಯ ಹರ್ಷರಾಜ ಶೆಟ್ಟಿ, ಪುತ್ತುಬಾವ, ವೈದ್ಯರಾದ ಡಾ.ಅಚ್ಯುತ ಕುಡ್ವ, ಪ್ರೌಢಶಾಲಾ ಹಿರಿಯ ಸಹ ಮುಖ್ಯಶಿಕ್ಷಕಿ ಜಯಲಕ್ಷ್ಮೀ ಟಿ.ನಾಯಕ್, ಉಪನ್ಯಾಸಕಿ ಡಾ.ರೇಖಾ ಮತ್ತಿತರರು ಉಪಸ್ಥಿತರಿದ್ದರು.

ಉಪನ್ಯಾಸಕ ಅಶೋಕ್ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು.

---

ವಿಜಯ ಕರ್ನಾಟಕ - 6-4-2021

ರು www.vijaykarna

## ಮೂಲ್ಕಿಯಲ್ಲಿ ಶಿಲೆಯೊಳಗಿನ ಶಿವ ಸಂದೇಶ ಅಭಿಯಾನ

# ನಾರಾಯಣಗುರುಗಳ ನಡೆ ಜಗತ್ತಿಗೆ ಮಾದರಿಯಾಗಲಿ



■ **ವಿಕ ಸುದ್ದಿಲೋಕ** ಮೂಲ್ಕಿ

ಬ್ರಹ್ಮಶ್ರೀ ನಾರಾಯಣಗುರುಗಳು ಒಂದೇ ಜಾತಿ-ಒಂದೇ ಮತ ಘೋಷಣೆ ಮೂಲಕ ಶಿಲೆಯೊಳಗೆ ಶಿವನನ್ನು ತೋರಿಸಿದವರು. ಅವರ ಆಚಾರ ವಿಚಾರಗಳು ಯುವ ಸಮುದಾಯಕ್ಕೆ ಅನುಕರಣೀಯವಾದುದು. ಭಾರತ ಸರಕಾರವು ನಾರಾಯಣಗುರುಗಳನ್ನು ಜಗದ್ಗುರು ಎಂದು ಘೋಷಿಸಿದ್ದು ಅವರ ನಡೆಯನ್ನು ಪಾಲಿಸಿ ಜಗತ್ತಿಗೆ ಮಾದರಿಯಾಗೋಣ ಎಂದು ಮೂಲ್ಕಿ ಸುವರ್ಣ ಆರ್ಟ್ಸ್‌ನ ಚಂದ್ರಶೇಖರ ಸುವರ್ಣ ಹೇಳಿದರು.

ಮೂಲ್ಕಿಯ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ನಾರಾಯಣಗುರು ಸಂದೇಶ ಅಭಿಯಾನ-2021ರ ಗುರು ನಡೆ-ಗ್ರಾಮದೆಡೆಯ 3ನೇ ನಡೆ ಶಿಲೆಯೊಳಗಿನ ಶಿವ ಕಾರ್ಯಕ್ರಮದ ಮುಖ್ಯ ಉಪನ್ಯಾಸಕರಾಗಿ ಮಾತನಾಡಿದರು.

ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಸಮಾರಂಭ ಉದ್ಘಾಟಿಸಿ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರುಗಳು ಹಿಂದುಳಿದ ವರ್ಗದ ಧ್ವನಿಯಾಗಿ ಜನರನ್ನು ಸಂಘಟನೆಯ ಮೂಲಕ ಬೆಳೆಸಿದರು. ಅವರ ಸಂದೇಶವನ್ನು ಯುವ ಜನತೆಗೆ ತಿಳಿಯಪಡಿಸುವ ಕಾರ್ಯಕ್ರಮ ಸ್ತುತ್ಯರ್ಹ ಎಂದರು.

ಸರಕಾರಿ ಪದವಿ ಪೂರ್ವ ಕಾಲೇಜು ಪ್ರಿನ್ಸಿಪಾಲ್ ಡಾ. ವಾಸುದೇವ ಬೆಳ್ಳೆ ಅಧ್ಯಕ್ಷತೆ ವಹಿಸಿದ್ದರು. ಪ್ರೌಢಶಾಲಾ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಹರ್ಷರಾಜ್ ಶೆಟ್ಟಿ ಜಿ.ಎಂ., ನಪಂ ಸದಸ್ಯ ಪುತ್ತುಬಾವ, ಪ್ರೌಢಶಾಲಾ ವಿಭಾಗದ ಹಿರಿಯ ಸಹ ಮುಖ್ಯಶಿಕ್ಷಕಿ ಜಯಲಕ್ಷ್ಮೀ ಟಿ. ನಾಯಕ್, ಪ್ರೌಢಶಾಲಾ ಹಳೆ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಎಂ.ಎ.ಆರ್.ಕುಡ್ವ, ಕಾಲೇಜು ಉಪನ್ಯಾಸಕಿ ರೇಖಾ ಮುಖ್ಯ ಅತಿಥಿಗಳಾಗಿದ್ದರು. ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕ ಅಶೋಕ್ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು.

**ಗುರುನಡೆ–4 ವಿವೇಕಾನಂದರು ಕಂಡ ಕೇರಳ**

**ಸರಕಾರಿ ಪದವಿಪೂರ್ವ ಕಾಲೇಜು ಚೇಳಾಯರು** **07.04.2021**


ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮಂಗಳಗಂಗೋತ್ರಿ – ೫೭೪ ೧೯೯

ದಿನಾಂಕ :
7–4–2021 ಬುಧವಾರ
ಬೆಳಿಗ್ಗೆ 11–30ರಿಂದ
ಸ್ಥಳ :
ಸರಕಾರಿ ಪದವಿಪೂರ್ವ ಕಾಲೇಜು,
ಚೇಳ್ಯಾರು

ತಮಗೆಲ್ಲರಿಗೂ ಆತ್ಮೀಯ ಸ್ವಾಗತ

ಕಾರ್ಯಕ್ರಮ ಕೋವಿಡ್ ನಿಯಮದನ್ವಯ ನಡೆಯುತ್ತದೆ.

ಗುರುನಡೆ ಗ್ರಾಮದೆಡೆ

ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನ–2021

ನಡೆ–4
ವಿವೇಕಾನಂದರು ಕಂಡ ಕೇರಳ

ಅಧ್ಯಕ್ಷತೆ : ಜಯಾನಂದ ಸುವರ್ಣ, ಪ್ರಾಂಶುಪಾಲರು, ಸರಕಾರಿ ಪದವಿಪೂರ್ವ ಕಾಲೇಜು, ಚೇಳ್ಯಾರು
ಉದ್ಘಾಟಕರು : ಶ್ರೀಮತಿ ಯಶೋಧ ಬಿ., ಅಧ್ಯಕ್ಷರು, ಚೇಳ್ಯಾರು ಗ್ರಾಮ ಪಂಚಾಯತ್
ನುಡಿ : ಶ್ರೀ ಜಯಾನಂದ ಚೇಳ್ಯಾರು, ಮಾಜಿ ಅಧ್ಯಕ್ಷರು, ಚೇಳ್ಯಾರು ಗ್ರಾಮ ಪಂಚಾಯತ್
ಮುಖ್ಯ ಅತಿಥಿಗಳು : ಶ್ರೀ ವೆಂಕಟೇಶ ಶೆಟ್ಟಿ, ಉಪಾಧ್ಯಕ್ಷರು, ಕಾಲೇಜು ಅಭಿವೃದ್ಧಿ ಸಮಿತಿ
ಶ್ರೀ ಪುಷ್ಪರಾಜ ಶೆಟ್ಟಿ, ಮಾಜಿ ಅಧ್ಯಕ್ಷರು, ಚೇಳ್ಯಾರು ಗ್ರಾಮ ಪಂಚಾಯತ್

ಡಾ. ಗಣೇಶ್ ಅಮೀನ್ ಸಂಕಮಾರ್
ಸಂಯೋಜಕರು
ಮತ್ತು
ಸದಸ್ಯರು, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ
ಸಾಕ್ಷಿ : ಸರಕಾರಿ ಪದವಿಪೂರ್ವ ಕಾಲೇಜು, ಚೇಳ್ಯಾರು ಇಲ್ಲಿನ ವಿದ್ಯಾರ್ಥಿಗಳು, ಹಳೆ ವಿದ್ಯಾರ್ಥಿಗಳು

**07.04.2021– ಗುರುನಡೆ ಗ್ರಾಮದೆಡೆ–4 ಕಾರ್ಯಕ್ರಮದ ಆಹ್ವಾನ ಪತ್ರಿಕೆ**

**07.04.2021 ಚೇಳಾಯರು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಯಶೋಧ ಇವರಿಂದ ಕಾರ್ಯಕ್ರಮ ಉದ್ಘಾಟನೆ**

**07.04.2021 ಶ್ರೀ ಜಯಾನಂದ ಚೇಳಾಯರು ಇವರಿಂದ ‘ವಿವೇಕಾನಂದರು ಕಂಡ ಕೇರಳ’ ಕುರಿತ ವಿಶೇಷ ಉಪನ್ಯಾಸ**

**07.04.2021 ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು**

07.04.2021– ಗುರುನಡೆ ಗ್ರಾಮದೆಡೆ–4 ಕಾರ್ಯಕ್ರಮದ ಪತ್ರಿಕಾ ತುಣುಕುಗಳು

# ‘ನಾರಾಯಣ ಗುರುಗಳ ಆದರ್ಶ ಅಳವಡಿಸಿಕೊಳ್ಳಿ’

## ► ಗುರು ನಡೆ ಗ್ರಾಮದೆಡೆ ಕಾರ್ಯಕ್ರಮಕ್ಕೆ ಚಾಲನೆ

**ಚೇಳ್ಯಾರು, ಎ. 8:** ಬ್ರಹ್ಮ ಶ್ರೀ ನಾರಾಯಣ ಗುರುಗಳು ಒಂದೆ ಜಾತಿ ಒಂದೆ ಮತ ಒಂದೆ ದೇವರು ಎಂದು ಸಾರಿದ ದಾರ್ಶನಿಕ. ವ್ಯಕ್ತಿ ಮೇಲು ಕೀಳು ಭಾವನೆಯನ್ನು ಹೋಗಲಾಡಿಸಿ ಇಡೀ ಸಮಾಜದ ಬದಲಾವಣೆಗೆ ಕಾರಣೀಭೂತರು. ಅವರ ತತ್ವ ಆದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಚೇಳ್ಯಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಜಯಾನಂದ ಚೇಳ್ಯಾರು ಹೇಳಿದರು.

ಅವರು ಸರಕಾರಿ ಪ.ಪೂ. ಕಾಲೇಜು ಚೇಳ್ಯಾರು ಇಲ್ಲಿ ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಮಂಗಳ ಗಂಗೋತ್ರಿ, ವತಿಯಿಂದ ನಡೆದ ಗುರು ನಡೆ ಗ್ರಾಮ ದೆಡೆ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.




ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳು ಮಾತನಾಡಿದರು.

ಕಲಿಕೆ, ಗುರುಹಿರಿಯರ ಬಗ್ಗೆ ಶ್ರದ್ಧಾಭಕ್ತಿ ಬೆಳೆಸಿಕೊಂಡರೆ ಅದು ಸಮಾಜದಲ್ಲಿ ನಮ್ಮನ್ನು ಉತ್ತಮ ಪ್ರಜೆಯನ್ನಾಗಿ ರೂಪಿಸುತ್ತದೆ ಎಂದರು. ಚೇಳ್ಯಾರು ಗ್ರಾ.ಪಂ. ಅಧ್ಯಕ್ಷೆ ಯಶೋದಾ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಮುಖ್ಯ ಅತಿಥಿಗ ಳಾಗಿ ಚೇಳ್ಯಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ವೆಂಕಟೇಶ ಶೆಟ್ಟಿ, ಮಂಗಳೂರು ವಿ.ವಿ. ಬ್ರಹ್ಮ ಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಚಾಲಕ ಜಾನಪದ ವಿದ್ವಾಂಸ ಡಾ। ಗಣೇಶ್ ಅಮೀನ್ ಸಂಕಮಾರ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಜಯಾನಂದ ಸುವರ್ಣ ಅಧ್ಯಕ್ಷತೆ ವಹಿಸಿದ್ದರು.

ಉದಯವಾಣಿ Fri, 09 April 2021
https://epaper.udayavani.com/c/59657312

ಗುರುನಡೆ–5 ನಾರಾಯಣ ಗುರುಗಳ ಆಧ್ಯಾತ್ಮ ತತ್ವ

ಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆ, ಪಡುಬೆಳ್ಳೆ                <u>14.07.2021</u>

ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮಂಗಳಗಂಗೋತ್ರಿ – ೫೭೪ ೧೯೯

ಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆ
ಪಡುಬೆಳ್ಳೆ
ಆಡಳಿತ ಸಂಸ್ಥೆ :
ಬಿಲ್ಲವರ ಅಸೋಸಿಯೇಶನ್, ಮುಂಬೈ

ದಿನಾಂಕ :
14–7–2021 ಬುಧವಾರ
ಬೆಳಿಗ್ಗೆ 9–30 ರಿಂದ

ಸ್ಥಳ :
ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲಾ ಸಭಾಂಗಣ

ತಮಗೆಲ್ಲರಿಗೂ ಆತ್ಮೀಯ ಸ್ವಾಗತ

ಗುರು ನಡೆ ಗ್ರಾಮದೆಡೆ



ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನ–2021

ನಡೆ–5
ನಾರಾಯಣಗುರುಗಳ ಆಧ್ಯಾತ್ಮ ತತ್ವ

ಉದ್ಘಾಟಕರು : ಶ್ರೀ ಎಸ್.ಕೆ. ಸಾಲಿಯಾನ್, ಪ್ರಶಸ್ತಿ ಪುರಸ್ಕೃತ ಕೃಷಿಕರು ಹಾಗೂ ಉದ್ಯಮಿ, ಬೆಳ್ಮಣ್ಣು
ಅಧ್ಯಕ್ಷತೆ : ಶ್ರೀ ಕಟಪಾಡಿ ಶಂಕರ ಪೂಜಾರಿ, ಮಾಜಿ ಅಧ್ಯಕ್ಷರು, ಉಡುಪಿ ಜಿಲ್ಲಾ ಪಂಚಾಯತ್
ನುಡಿ : ಶ್ರೀ ಧನಂಜಯ ಶಾಂತಿ, ಸಂಚಾಲಕರು, ಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಗಳು, ಪಡುಬೆಳ್ಳೆ
ಮುಖ್ಯ ಅತಿಥಿಗಳು : ಶ್ರೀ ರಾಮಚಂದ್ರ ಕಿದಿಯೂರು, ಉದ್ಯಮಿ, ಉಡುಪಿ
ಶ್ರೀಮತಿ ಗೀತಾ ವಾಗ್ಲೆ, ನಿಕಟಪೂರ್ವ ಸದಸ್ಯರು, ತಾಲೂಕು ಪಂಚಾಯತ್
ಶ್ರೀ ರಾಘು ಪೂಜಾರಿ, ಬಿಲ್ಲವ ಸೇವಾ ಸಂಘ, ಪಡುಬೆಳ್ಳೆ
ಉಪಸ್ಥಿತಿ : ಶ್ರೀ ಜಿನರಾಜ್ ಸಿ. ಸಾಲಿಯಾನ್, ಮುಖ್ಯ ಶಿಕ್ಷಕರು, ಶ್ರೀ ನಾರಾಯಣಗುರು ಆಂಗ್ಲಮಾಧ್ಯಮ ಶಾಲೆ
ಶ್ರೀಮತಿ ಉಷಾ ಎಸ್., ಮುಖ್ಯ ಶಿಕ್ಷಕರು, ಶ್ರೀ ನಾರಾಯಣಗುರು ಕನ್ನಡ ಮಾಧ್ಯಮ ಪ್ರೌಢಶಾಲೆ

ಡಾ. ಗಣೇಶ್ ಅಮೀನ್ ಸಂಕಮಾರ್
ಸಂಯೋಜಕರು, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ,
ಮಂಗಳೂರು ವಿಶ್ವವಿದ್ಯಾನಿಲಯ

ಡಾ. ಕಿಶೋರ್ ಕುಮಾರ್ ಸಿ.ಕೆ.
ಮಾನ್ಯ ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ

ಶ್ರೀ ನಾರಾಯಣಗುರು ಆಂಗ್ಲ ಮಾಧ್ಯಮ ಶಾಲೆ ಮತ್ತು ಕನ್ನಡ ಮಾಧ್ಯಮ ಪ್ರೌಢಶಾಲೆ

ಸಾಕ್ಷಿ : ಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಗಳು, ಪಡುಬೆಳ್ಳೆ ಇಲ್ಲಿಯ ಆಡಳಿತ ಸಮಿತಿ ಸದಸ್ಯರು, ಶಿಕ್ಷಕ, ಶಿಕ್ಷಕೇತರ ವೃಂದ, ಹೆತ್ತವರು ಮತ್ತು ಸ್ಥಳೀಯರು

ಕಾರ್ಯಕ್ರಮ ಕೋವಿಡ್ ನಿಯಮದನ್ವಯ ನಡೆಯುತ್ತದೆ.

14.07.2021– ಗುರುನಡೆ ಗ್ರಾಮದೆಡೆ–5 ಕಾರ್ಯಕ್ರಮದ ಆಹ್ವಾನ ಪತ್ರಿಕೆ

**<u>14.07.</u>2021 ಶ್ರೀ ಕಟಪಾಡಿ ಶಂಕರ ಪೂಜಾರಿಯವರಿಂದ ಕಾರ್ಯಕ್ರಮದ ಉದ್ಘಾಟನೆ.**

**14.07.2021– ಗುರುನಡೆ ಗ್ರಾಮದೆಡೆ–5 ಕಾರ್ಯಕ್ರಮದ ಪತ್ರಿಕಾ ತುಣುಕುಗಳು**

## ಪಡುಬೆಳ್ಳೆ: ಬ್ರಹ್ಮಶ್ರೀ ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನ




**ಶಿರ್ವ,ಜು. 14:** ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ಪಡುಬೆಳ್ಳೆ ಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಗುರುನಡೆ ಗ್ರಾಮದೆಡೆ- ನಾರಾಯಣ ಗುರು ಶಿಕ್ಷಣ ಸಂದೇಶ ಅಭಿಯಾನ ಕಾರ್ಯಕ್ರಮವು ಜು. 14 ರಂದು ಆಂಗ್ಲ ಮಾಧ್ಯಮ ಶಾಲಾ ಸಭಾಂಗಣದಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿ, ಕಾರ್ಯಕ್ರಮ ಉದ್ಘಾಟಿಸಿದ ಉಡುಪಿ ಜಿ.ಪಂ. ಮಾಜಿ ಅಧ್ಯಕ್ಷ ಕಟಪಾಡಿ ಶಂಕರ ಪೂಜಾರಿ ಮಾತನಾಡಿದರು. ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜಕ ಡಾ। ಗಣೇಶ್ ಅಮೀನ್ ಸಂಕಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಡುಬೆಳ್ಳೆ ಶ್ರೀ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಸಂಚಾಲಕ ಧನಂಜಯ ಶಾಂತಿ ನಾರಾಯಣ ಗುರುಗಳ ತತ್ವ ಸಿದ್ಧಾಂತಗಳ ಬಗ್ಗೆ ಉಪನ್ಯಾಸ ನೀಡಿದರು. ತಾ। ಪಂ. ಮಾಜಿ ಸದಸ್ಯೆ ಗೀತಾ ವಾಗ್ಲೆ ಪಡುಬೆಳ್ಳೆ ಬಿಲ್ಲವ ಸೇವಾ ಸಂಘದ ಅಧ್ಯಕ್ಷ ರಾಘು ಪೂಜಾರಿ, ಸುರತ್ಕಲ್ ಗೋವಿಂದದಾಸ ಕಾಲೇಜಿನ ಉಪನ್ಯಾಸಕಿ ಜಯಂತಿ ಸಂಕಮಾರ್, ಶಿಕ್ಷಕ, ಶಿಕ್ಷಕೇತರ ವೃಂದ, ರಕ್ಷಕ -ಶಿಕ್ಷಕ ಸಂಘದ ಸದಸ್ಯರು, ವಿದ್ಯಾರ್ಥಿಗಳ ಹೆತ್ತವರು ಉಪಸ್ಥಿತರಿದ್ದರು.

ಶ್ರೀ ನಾರಾಯಣಗುರು ಆಂಗ್ಲಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಜಿನರಾಜ ಸಿ. ಸಾಲಿಯಾನ್ ಸ್ವಾಗತಿಸಿದರು. ಶಿಕ್ಷಕಿ ಸಂಗೀತಾ ಕಾರ್ಯಕ್ರಮ ನಿರೂಪಿಸಿ, ಕನ್ನಡ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಉಷಾ.ಎಸ್ ವಂದಿಸಿದರು.


ಉದಯವಾಣಿ Thu, 15 July 2021
https://epaper.udayavani.com/c/61807341




16.09.2021– ಗುರುನಡೆ ಗ್ರಾಮದೆಡೆ–6 ಕಾರ್ಯಕ್ರಮದ ಆಹ್ವಾನ ಪತ್ರಿಕೆ

16.09.2021– ಗುರುನಡೆ ಗ್ರಾಮದೆಡೆ–6 ಕಾರ್ಯಕ್ರಮದ ಪತ್ರಿಕಾ ತುಣುಕುಗಳು



ಸಾಮಾಜಿಕ

## ಮೂಲ್ಕಿ: ಗುರು ನಡೆ–ಗ್ರಾಮದೆಡೆ ಅಭಿಯಾನ ಉದ್ಘಾಟನೆ

**ಮೂಲ್ಕಿ, ಸೆ. 16:** ಬ್ರಹ್ಮಶ್ರೀ ನಾರಾಯಣ ಗುರುಗಳು ಸಮಾನತೆ ಮತ್ತು ಅದ್ವೈತ ತತ್ವದ ಮೂಲಕ ಶಿವನನ್ನು ಕಂಡಿರುವ ಮಹಾನ್ ಸಮಾಜ ಸುಧಾರಕ ಎಂದು ಧರ್ಮದರ್ಶಿ ಹರಿಕೃಷ್ಣಪುನರೂರು ಹೇಳಿದರು.

ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ಮೂಲ್ಕಿ ಶ್ರೀ ನಾರಾಯಣ ಗುರು ಸಂಯುಕ್ತ ಪ.ಪೂ. ಕಾಲೇಜಿನಲ್ಲಿ ನಡೆದ ಗುರುನಡೆ- ಗ್ರಾಮದೆಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಉಪನ್ಯಾಸ ನೀಡಿದ ಮೂಲ್ಕಿ ಸರಕಾರಿ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಡಾ। ವಾಸುದೇವ ಬೆಳ್ಳೆ ಮಾತನಾಡಿ, ಶ್ರೀ ನಾರಾಯಣ ಗುರುಗಳು ವಿಶ್ವಧರ್ಮದ ಪ್ರತಿಪಾದಕರಾಗಿ ಜಗತ್ತಿಗೆ ಮಾನವ ಧರ್ಮವನ್ನು ಪಸರಿಸಿದ ಸರ್ವಶ್ರೇಷ್ಠ ಸಂತ ಎಂದು ಹೇಳಿದರು.

ನಾರಾಯಣಗುರು ಸಂಯುಕ್ತ ಪ.ಪೂ. ಕಾಲೇಜಿನ ಸಂಚಾಲಕ ಎಚ್.ವಿ. ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. 2

# ಮೂಲ್ಕಿ: ಗುರು ನಡೆ–ಗ್ರಾಮದೆಡೆ



**ಮೂಲ್ಕಿ:** ಬ್ರಹ್ಮಶ್ರೀ ನಾರಾಯಣ ಗುರುಗಳು ಸಮಾನತೆ ಮತ್ತು ಸಂಘಟನೆಯ ಮೂಲಕ ಭಗವಂತನನ್ನು ಕಂಡಿರುವ ಮಹಾನ್ ಸಮಾಜ ಸುಧಾರಕ ಎಂದು ರಾಜ್ಯ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಧರ್ಮದರ್ಶಿ ಹರಿಕೃಷ್ಣ ಪುನರೂರು ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ಮೂಲ್ಕಿ ಶ್ರೀನಾರಾಯಣ ಗುರು ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಗುರು ನಡೆ–ಗ್ರಾಮದೆಡೆ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.

ನಾರಾಯಣಗುರು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಂಚಾಲಕ ಎಚ್.ವಿ. ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಮೂಲ್ಕಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲ್ ಡಾ. ವಾಸುದೇವ ಬೆಳ್ಳೆ ವಿಶೇಷ ಉಪನ್ಯಾಸ ನೀಡಿದರು.

ಭಾರತ್ ಸ್ಕೌಟ್ ಆ್ಯಂಡ್ ಗೈಡ್ಸ್‌ನ ಜಿಲ್ಲಾ ಸಹಾಯಕ ಆಯುಕ್ತ ಎಂ. ಸರ್ವೋತ್ತಮ ಅಂಚನ್, ಮಂಗಳೂರು ವಿಶ್ವ ವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್, ರಾಷ್ಟ್ರೀಯ ಬಿಲ್ಲವರ ಮಹಾ ಮಂಡಲದ ಅಧ್ಯಕ್ಷ ಡಾ. ರಾಜಶೇಖರ್ ಕೋಟ್ಯಾನ್, ಮೂಲ್ಕಿ ಬಿಲ್ಲವ ಸಂಘದ ಅಧ್ಯಕ್ಷ ರಮೇಶ್ ಅಮೀನ್ ಕೊಕ್ಕರ್‌ಕಲ್, ರಂಗಕರ್ಮಿ ಮೂಲ್ಕಿ ಚಂದ್ರಶೇಖರ ಸುವರ್ಣ, ಲಲಿತಾ ರುಕ್ಕರಾಮ ಸಾಲ್ಯಾನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಭಾಸ್ಕರ ಎಂ. ಸಾಲ್ಯಾನ್, ಸದಸ್ಯರಾದ ಹರೀಂದ್ರ ಸುವರ್ಣ, ಹೇಮರಾಜ್, ರತ್ನಾಕರ್, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಯತೀಶ್ ಅಮೀನ್, ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕ ಕೇಶವ್ ಉಪಸ್ಥಿತರಿದ್ದರು. ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕ ರಮೇಶ್ ನಿರೂಪಿಸಿದರು. ಬಾಲಚಂದ್ರ ಸನಿಲ್ ವಂದಿಸಿದರು.

---

**ಗ್ರಾಮ ನಿನಾದ, ಗುರುನಡೆ ಗ್ರಾಮದೆಡೆ ಸಮಾರೋಪ ಸಮಾರಂಭ,ಪಾವಂಜೆ** **27.02.2022**

ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
'ನಿನಾದ' ತುಳು ಸಂಸ್ಕೃತಿ ಅಧ್ಯಯನ ಕೇಂದ್ರ
ಇವರ ಸಂಯೋಜನೆಯಲ್ಲಿ

ರಾಷ್ಟ್ರೀಯ ಸೇವಾ ಯೋಜನಾ ಘಟಕ
ಗೋವಿಂದದಾಸ ಪ್ರಥಮ ದರ್ಜೆ ಕಾಲೇಜು, ಸುರತ್ಕಲ್
ಶ್ರೀ ನಾರಾಯಣಗುರು ಶಿಕ್ಷಣ ಸಂಸ್ಥೆಗಳು, ಕಾಟಿಪಳ್ಳ
ಇವರ ಸಹಯೋಗದಲ್ಲಿ



ಗ್ರಾಮ ನಿನಾದ
ಗುರು ನಡೆ ಗ್ರಾಮದೆಡೆ
ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನದ
ಸಮಾರೋಪ ಸಮಾರಂಭ

ಡಾ. ಮೀನಾಕ್ಷಿ ರಾಮಚಂದ್ರ ಇವರು ಅನುವಾದಿಸಿದ
'ಶ್ರೀ ನಾರಾಯಣಗುರು ಸತ್ಯದರ್ಶನ'
ಕೃತಿ ಬಿಡುಗಡೆ
27–2–2022 ಆದಿತ್ಯವಾರ ಬೆಳಿಗ್ಗೆ 10 ರಿಂದ 1–30
ನಿನಾದ ರಂಗ ಮಂದಿರದ ವಠಾರ, ಪಾವಂಜೆ

ತಮಗೆಲ್ಲರಿಗೂ ಆತ್ಮೀಯ ಸ್ವಾಗತ

ಶ್ರೀಮತಿ ರವಿಕಲಾ, ಶ್ರೀಮತಿ ಅಕ್ಷತಾ ವಿ.
ಯೋಜನಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನಾ ಘಟಕ
ಗೋವಿಂದದಾಸ ಕಾಲೇಜು, ಸುರತ್ಕಲ್

ಡಾ. ಗಣೇಶ್ ಅಮೀನ್ ಸಂಕಮಾರ್
ಸಂಯೋಜಕರು
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮತ್ತು ಸರ್ವ ಸದಸ್ಯರು

ಡಾ. ಕಿಶೋರ್ ಕುಮಾರ್ ಸಿ.ಕೆ.
ಮಾನ್ಯ ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ

ಶ್ರೀ ಮಧುಕರ ಅಮೀನ್, ಲ। ಚಂದ್ರಶೇಖರ ನಾನಿಲ್, ಲ। ಭಾಸ್ಕರ ಸಾಲ್ಯಾನ್, ಶ್ರೀ ಗಗನ್ ಸುವರ್ಣ, ಶ್ರೀ ಧರ್ಮಪಾಲ್
ಶ್ರೀಮತಿ ಜಯಂತಿ ಸಂಕಮಾರ್, ಅನು ಭವ ಸಂಕಮಾರ್
ಸದಸ್ಯರು, ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ, ಪಾವಂಜೆ

**ಗ್ರಾಮ ನಿನಾದ, ಗುರುನಡೆ ಗ್ರಾಮದೆಡೆ ಸಮಾರೋಪ ಸಮಾರಂಭದ ಆಹ್ವಾನ ಪತ್ರಿಕೆ**




ಶ್ರೀ ನಾರಾಯಣಗುರು ಸತ್ಯದರ್ಶನ ಕೃತಿ ಬಿಡುಗಡೆ



ಮಾನ್ಯ ಕುಲಪತಿಗಳಾದ ಪ್ರೊ. ಸುಬ್ರಹ್ಮಣ್ಯ ಯಡಪಡಿತ್ತಾಯ ಇವರಿಂದ ಅಧ್ಯಕ್ಷ ಭಾಷಣ



ಗ್ರಾಮ ನಿನಾದ, ಗುರುನಡೆ ಗ್ರಾಮದೆಡೆ ಸಮಾರೋಪ ಸಮಾರಂಭದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು

ಗ್ರಾಮ ನಿನಾದ, ಗುರುನಡೆ ಗ್ರಾಮದೆಡೆ ಸಮಾರೋಪ ಸಮಾರಂಭದ ಪತ್ರಿಕಾ ತುಣುಕುಗಳು



# ವಿವಿಯಿಂದ ನಾರಾಯಣಗುರು ಸಮಗ್ರ ಕೃತಿಗಳು ಕನ್ನಡಕ್ಕೆ

## ಗ್ರಾಮ ನಿನಾದ ಗುರು ನಡೆ ಗ್ರಾಮದೆಡೆ ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನದ ಸಮಾರೋಪ

■ ವಿಕ ಸುದ್ದಿಲೋಕ ಹಳೆಯಂಗಡಿ

ಬ್ರಹ್ಮಶ್ರೀ ನಾರಾಯಣ ಗುರುಗಳ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿಕೊಳ್ಳಲು ಶಿವಗಿರಿಯಿಂದ ಅನುಮತಿಯನ್ನು ಮಂಗಳೂರು ವಿವಿ ಪಡೆದುಕೊಂಡಿದೆ. ಇದು ಮುಂದಿನ ಸಂಶೋಧನೆಗೂ ಆಕರವಾಗಲಿದೆ. ಈಗ 2 ಕೃತಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ವಿವಿ ಉಪ ಕುಲಪತಿ ಡಾ. ಪಿ.ಎಸ್. ಯಡಪಡಿತ್ತಾಯ ಹೇಳಿದರು.

ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ ಸಹಯೋಗದಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜು ಎನ್ನೆಸೆಸ್ ಘಟಕ, ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳು ಕಾಟಿಪಳ್ಳ ಸಹಯೋಗದಲ್ಲಿ ಪಾವಂಜೆ ನಿನಾದ ರಂಗ ಮಂದಿರದಲ್ಲಿ ಭಾನುವಾರ ನಡೆದ ಗ್ರಾಮ ನಿನಾದ ಗುರು ನಡೆ ಗ್ರಾಮದೆಡೆ ನಾರಾಯಣ ಗುರು ಶಿಕ್ಷಣ ಸಂದೇಶ ಅಭಿಯಾನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಾ.ಮೀನಾಕ್ಷಿ ರಾಮಚಂದ್ರ ಅನುವಾದಿಸಿದ ಶ್ರೀ ನಾರಾಯಣ ಗುರು ಸತ್ಯದರ್ಶನ ಕೃತಿ ಬಿಡುಗಡೆಗೊಳಿಸಿದರು.

ವಿಜಯ ಕರ್ನಾಟಕ ಸ್ಥಾನೀಯ ಸಂಪಾದಕ ಯು.ಕೆ. ಕುಮಾರನಾಥ್, ತೆಂಕನಿಡಿಯೂರು ಸರಕಾರಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ. ಗಣನಾಥ ಎಕ್ಕಾರು ಜನಪದ ಕ್ರೀಡೆಗಳನ್ನು ಉದ್ಘಾಟಿಸಿದರು. ನಗರದ ಮಕ್ಕಳಿಗೆ ಆಡಲು ಜಾಗ ಸೌಲಭ್ಯಗಳ ಕೊರತೆ ಇದೆ, ಕೈ- ಕಲ್ಲಿನಿಂದ ಆಡಲು ಸಾಧ್ಯವಿರುವ ಗ್ರಾಮೀಣ ಆಟಗಳು ನಿಜವಾಗಿ ಯೂ ಚೈತನ್ಯ ಶಾಲಿಯಾಗಿವೆ. ಗ್ರಾಮೀಣ ಆಟಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು ಅಗತ್ಯ. ಸಂಸ್ಕೃತಿಗಳು ನದಿ ತೀರದಲ್ಲಿ ಹುಟ್ಟಿ ಬಂದಿದ್ದವು. ಇಂದು ನದಿಗಳನ್ನೇ ನಾವು ನಾಶಗೊಳಿಸುತ್ತಿದ್ದೇವೆ ಎಂದು ಯು.ಕೆ. ಕುಮಾರನಾಥ್ ಕಳವಳ ವ್ಯಕ್ತಪಡಿಸಿದರು.

ಮಂಗಳೂರು ವಿವಿ ಕುಲಸಚಿವ ಡಾ. ಕಿಶೋರ್ ಕುಮಾರ್ ಸಿಕೆ, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್, ಡಾ. ಗಣನಾಥ ಶೆಟ್ಟಿ ಎಕ್ಕಾರು ಮಾತನಾಡಿದರು. ನಿನಾದ ಪೂಜಾರಿ ಕಡಂಬೋಡಿ 12ನೇ ವರ್ಷದ ಸಂಸ್ಮರಣೆ ನಡೆಯಿತು.

ಕಡಂಬೋಡಿ ಮಹಾಬಲ ಪೂಜಾರಿ, ಕುಸುಮಾ ಮಹಾಬಲ ಪೂಜಾರಿ ಕಡಂಬೋಡಿ, ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ದಯಾಕರ್ ಪಿ. ಕುಳಾಯಿ, ಕೊಣಾಜೆ ಶ್ರೀ ಉಳ್ಳಾಲ್ತಿ ಅಮ್ಮನವರ ಕ್ಷೇತ್ರದ ಆಡಳಿತ ಮೊಕ್ತೇಸರ ಪ್ರಸಾದ್ ರೈ ಕಲ್ಲಿಮಾರ್, ಎಳತ್ತೂರು ಶ್ರೀ ಮಹಾಲಿಂಗೇಶ್ವರ ದೇವ ಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ಹೆಗ್ಡೆ, ಗೋವಿಂದದಾಸ ಪ್ರಿನ್ಸಿಪಾಲ್ ಪ್ರೊ. ಕೃಷ್ಣಮೂರ್ತಿ, ಎನ್ನೆಸೆಸ್ ಅಧಿಕಾರಿಗಳಾದ ರವಿಕಲಾ, ಅಕ್ಷತಾ ವಿ., ಮುಖ್ಯ ಶಿಕ್ಷಕಿ ಗುಣವತಿ ರಮೇಶ್ ಕಾಟಿಪಳ್ಳ, ಅನುರಾಧಾ ರಾಜೀವ್, ಓರಿಯಂಟಲ್ ಇನ್ಶೂರೆನ್ಸ್ ಕಂಪನಿಯ ಯಾದವ ದೇವಾಡಿಗ, ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಸದಸ್ಯರಾದ ಮಧುಕರ ಅಮೀನ್, ಭಾಸ್ಕರ ಸಾಲ್ಯಾನ್, ಜಯಂತಿ ಸಂಕಮಾರ್, ಅನು ಸಂಕಮಾರ್ ಮತ್ತಿತರರು ಉಪಸ್ಥಿತರಿದ್ದರು.

ಗೋವಿಂದದಾಸ ಪದವಿ ಪೂರ್ವ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿ ಹಿತ ಉಮೇಶ್ ಅವರಿಗೆ ಸನ್ಮಾನ ನಡೆಯಿತು. ಕಾಟಿಪಳ್ಳ ಶ್ರೀ ನಾರಾಯಣ ಗುರು ಪದವಿ ಪೂರ್ವ ಕಾಲೇಜು ಉಪನ್ಯಾಸಕ ಧರ್ಮಪಾಲ ಎಂ.ಟಿ. ನಾರಾಯಣ ಗುರು ಸತ್ಯದರ್ಶನ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ವಿದ್ಯಾರ್ಥಿಗಳಿಗೆ ಕ್ವಿಜ್, ಲಗೋರಿ, ಕುಟ್ಟಿದೊಣ್ಣೆ, ಹುಲಿ-ದನ ಇತ್ಯಾದಿ ಸ್ಪರ್ಧೆ ನಡೆಯಿತು.

### ರಂಜಿಸಿದ ತಪ್ಪಂಗಾಯಿ ಸ್ಪರ್ಧೆ

ಈ ಸಂದರ್ಭ ತೆಂಗಿನ ಕಾಯಿ ಕುಟ್ಟುವ ಸ್ಪರ್ಧೆ ಮತ್ತು ಅಗೋಳಿ ಮಂಜಣ್ಣ ನೆನಪಿನಲ್ಲಿ ವಿದ್ಯಾರ್ಥಿಗಳಿಗೆ ತಪ್ಪಂಗಾಯಿ ಜನಪದ ಕ್ರೀಡೆ ಸ್ಪರ್ಧೆ ವಿದ್ಯಾರ್ಥಿಗಳನ್ನು, ಸಭಿಕರನ್ನು ರಂಜಿಸಿತು,

28.02.2022

ಉದಯವಾಣಿ: 02-03-2022

'ಗುರು ನಡೆ ಗ್ರಾಮದೆಡೆ' ಅಭಿಯಾನ ಸಮಾರೋಪ

# 'ನಾರಾಯಣಗುರುಗಳ ತತ್ವಾದರ್ಶಗಳು ಸಾರ್ವಕಾಲಿಕ'

**ಹಳೆಯಂಗಡಿ, ಫೆ. 28:** 19ನೇ ಶತಮಾನದಲ್ಲಿ ನಾರಾಯಣ ಗುರುಗಳು ಹಿಂದುಳಿದ ವರ್ಗದ ಅಭಿವೃದ್ಧಿಗಾಗಿ ಕೈಗೊಂಡ ಶೈಕ್ಷಣಿಕ-ಸಾಮಾಜಿಕ ಕಾರ್ಯಗಳು ಇಂದಿನ ಯುವ ಸಮಾಜದ ಅಧ್ಯಯನಕ್ಕೆ ಪೂರಕವಾಗಿದ್ದು ಅವರ ತತ್ವಾದರ್ಶಗಳು ಸಾರ್ವಕಾಲಿಕವಾಗಿ ಪ್ರಸ್ತುತವಾಗಿವೆ ಎಂದು ಮಂಗಳೂರು ವಿವಿ ಕುಲಪತಿ ಪ್ರೊ। ಸುಬ್ರಹ್ಮಣ್ಯ ಯಡಪಡಿತ್ತಾಯ ಹೇಳಿದರು.



ಪಾವಂಜೆಯಲ್ಲಿ ಬಹುಮುಖ ಪ್ರತಿಭೆ ಹಿತಾ ಉಮೇಶ್ ಅವರನ್ನು ಸಮ್ಮಾನಿಸಲಾಯಿತು.

ಹಳೆಯಂಗಡಿ ಬಳಿಯ ಪಾವಂಜೆಯ ನಿನಾದ ರಂಗಮಂದಿರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ ಪಾವಂಜೆ ಇದರ ಜಂಟಿ ಸಂಯೋಜನೆಯಲ್ಲಿ ಗೋವಿಂದದಾಸ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಕಾಟಿಪಳ್ಳದ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಸಹಕಾರದಲ್ಲಿ ಗುರು ನಡೆ ಗ್ರಾಮದೆಡೆ ಎನ್ನುವ ನಾರಾಯಣ ಗುರುಗಳ ಶಿಕ್ಷಣ ಸಂದೇಶದ ಸಮಾಜಮುಖಿ ಅಭಿಯಾನದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶ್ರೀ ನಾರಾಯಣಗುರು ಸತ್ಯದರ್ಶನ ಅನುವಾದ ಕೃತಿಯನ್ನು ಅನಾವರಣಗೊಳಿಸಲಾಯಿತು. ಬಹುಮುಖ ಪ್ರತಿಭೆ ಹಿತಾ ಉಮೇಶ್ ಅವರನ್ನು ಸಮ್ಮಾನಿಸಲಾಯಿತು.

ಶ್ರೀ ನಾರಾಯಣ ಗುರು ಪದವಿ ಪೂರ್ವ ಕಾಲೇಜು ಕಾಟಿಪಳ್ಳ ಉಪನ್ಯಾಸಕ ಧರ್ಮಪಾಲ ಎಂ.ಟಿ. ಅವರು ನಾರಾಯಣಗುರು ಸತ್ಯದರ್ಶನದ ಬಗ್ಗೆ ಉಪನ್ಯಾಸ ನೀಡಿದರು.

### ಸಮಾಜಮುಖಿ ಅಭಿಯಾನ ಯಶಸ್ವಿ

ವಿಶ್ವವಿದ್ಯಾನಿಲಯದ ಕುಲಸಚಿವ ಡಾ। ಕಿಶೋರ್ ಕುಮಾರ್ ಸಿ.ಕೆ. ಮಾತನಾಡಿ, ಗ್ರಾಮೀಣ ಯುವ ಜನತೆಗೆ ನಾರಾಯಣ ಗುರುಗಳ ತತ್ವ ತಿಳಿವಳಿಕೆ ಮೂಡಿಸಲು ಮಂಗಳೂರು ವಿಶ್ವವಿದ್ಯಾನಿಲಯವು ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಸ್ಥಾಪಿಸಿ ಗುರು ನಡೆ ಗ್ರಾಮದೆಡೆ ಎನ್ನುವ ನಾರಾಯಣ ಗುರುಗಳ ಶಿಕ್ಷಣ ಸಂದೇಶದ ಸಮಾಜಮುಖಿ ಅಭಿಯಾನ ಯಶಸ್ವಿಯಾಗಿ ನಡೆಸಿದೆ. ನಾರಾಯಣ ಗುರುಗಳ ಬಗ್ಗೆ ಈಗಾಗಲೇ 2 ಕೃತಿ ಬಿಡುಗಡೆಯಾಗಿದ್ದು ಇನ್ನೂ 5 ಕೃತಿಗಳು ಬಿಡುಗಡೆ ಹಂತದಲ್ಲಿದೆ ಎಂದರು.

ಪತ್ರಕರ್ತ ಯು.ಕೆ. ಕುಮಾರನಾಥ್, ಉಡುಪಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ। ಗಣನಾಥ ಶೆಟ್ಟಿ ಎಕ್ಕಾರ್, ಉದ್ಯಮಿ ಕಡಂಬೋಡಿ ಮಹಾಬಲ ಪೂಜಾರಿ, ಕುಸುಮಾ ಮಹಾಬಲ ಪೂಜಾರಿ, ಕೊಣಾಜೆ ಉಳ್ಳಾಲ್ತಿ ಅಮ್ಮನವರ ಕ್ಷೇತ್ರದ ಆಡಳಿತ ಮೊಕ್ತೇಸರ ಪ್ರಸಾದ್‌ರೈ ಕಲ್ಲಿಮಾರ್, ಎಳತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ಹೆಗ್ಡೆ, ಕಾಟಿಪಳ್ಳ ಶ್ರೀ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ದಯಾಕರ್ ಪಿ. ಕುಳಾಯಿ, ಸುರತ್ಕಲ್ ಗೋವಿಂದದಾಸ ಕಾಲೇಜು ಪ್ರಾಂಶುಪಾಲ ಪ್ರೊ। ಕೃಷ್ಣಮೂರ್ತಿ, ಓರಿಯಂಟಲ್ ಇನ್ಶೂರೆನ್ಸ್ ಶಾಖಾ ಪ್ರಬಂಧಕ ಯಾದವ ದೇವಾಡಿಗ, ಲಯನ್ಸ್ ವಲಯಾಧ್ಯಕ್ಷೆ ಗುಣವತಿ ರಮೇಶ್, ಯೋಜನಾಧಿಕಾರಿಗಳಾದ ರವಿಕಲಾ, ಅಕ್ಷತಾ ವಿ., ನಿನಾದ ನಿರ್ದೇಶಕರಾದ ಜಯಂತಿ ಸಂಕಮಾರ್, ಮಧುಕರ ಅಮೀನ್, ಚಂದ್ರಶೇಖರ ನಾನಿಲ್, ಭಾಸ್ಕರ ಸಾಲ್ಯಾನ್, ಧರ್ಮಪಾಲ್, ಅನು-ಭವ ಸಂಕಮಾರ್ ಉಪಸ್ಥಿತರಿದ್ದರು.

ಅಧ್ಯಯನ ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು.

---

ಪ್ರಜಾವಾಣಿ 02.03.2022

ಮಂಗಳೂರು ವಿವಿ ಕುಲಪತಿ ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ

# ನಾರಾಯಣಗುರು ಆದರ್ಶ ಸಾರ್ವಕಾಲಿಕ

ಪ್ರಜಾವಾಣಿ ವಾರ್ತೆ

**ಮೂಲ್ಕಿ:** '19ನೇ ಶತಮಾನದಲ್ಲಿ ನಾರಾಯಣ ಗುರುಗಳು ಹಿಂದುಳಿದ ವರ್ಗದ ಅಭಿವೃದ್ಧಿಗಾಗಿ ಕೈಗೊಂಡ ಶೈಕ್ಷಣಿಕ-ಸಾಮಾಜಿಕ ಕಾರ್ಯಗಳು ಇಂದಿನ ಯುವ ಸಮಾಜದ ಅಧ್ಯಯನಕ್ಕೆ ಬಹಳ ಪೂರಕವಾಗಿದ್ದು, ಅವರ ತತ್ವ ಆದರ್ಶಗಳು ಸರ್ವಕಾಲಿಕವಾಗಿ ಪ್ರಸ್ತುತ' ಎಂದು ಮಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ ಹೇಳಿದರು.



ಮೂಲ್ಕಿಯ ಪಾವಂಜೆಯಲ್ಲಿ ನಡೆದ ಸಾಹಿತ್ಯ ಕಾರ್ಯಕ್ರಮದಲ್ಲಿ ಹಿತಾ ಉಮೇಶ್ ಅವರನ್ನು ಸನ್ಮಾನಿಸಲಾಯಿತು.

ಮೂಲ್ಕಿಯ ಪಾವಂಜೆಯ ನಿನಾದ ರಂಗಮಂದಿರದಲ್ಲಿ ಮಂಗಳೂರು ವಿಶ್ವವಿದ್ಯಾಲಯ, ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ, ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ ಪಾವಂಜೆ ಇವರ ಸಂಯೋಜನೆಯಲ್ಲಿ ಗೋವಿಂದದಾಸ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕ ಮತ್ತು ಕಾಟಿಪಳ್ಳದ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ 'ಗುರು ನಡೆ ಗ್ರಾಮದೆಡೆ' ಎಂಬ ನಾರಾಯಣ ಗುರುಗಳ ಶಿಕ್ಷಣ ಸಂದೇಶದ ಸಮಾಜ ಮುಖಿ ಅಭಿಯಾನದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ವಿಶ್ವವಿದ್ಯಾಲಯದ ಕುಲಸಚಿವ ಡಾ.ಕಿಶೋರ್ ಕುಮಾರ್ ಸಿ.ಕೆ. ಮಾತನಾಡಿ, 'ಗ್ರಾಮೀಣ ಯುವಜನತೆಗೆ ನಾರಾಯಣ ಗುರುಗಳ ತತ್ವದ ತಿಳಿವಳಿಕೆ ಮೂಡಿಸಲು ಮಂಗಳೂರು ವಿಶ್ವವಿದ್ಯಾಲಯವು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ ಸ್ಥಾಪಿಸಿ, 'ಗುರು ನಡೆ ಗ್ರಾಮದೆಡೆ' ಎನ್ನುವ ನಾರಾಯಣ ಗುರುಗಳ ಶಿಕ್ಷಣ ಸಂದೇಶದ ಸಮಾಜಮುಖಿ ಅಭಿಯಾನ ಯಶಸ್ವಿಯಾಗಿ ನಡೆಸಿದೆ. ನಾರಾಯಣ ಗುರುಗಳ ಬಗ್ಗೆ ಈಗಾಗಲೇ 2 ಕೃತಿ ಬಿಡುಗಡೆಯಾಗಿದ್ದು, ಇನ್ನೂ 5 ಕೃತಿಗಳು ಬಿಡುಗಡೆ ಹಂತದಲ್ಲಿವೆ' ಎಂದರು.

ಶ್ರೀ ನಾರಾಯಣಗುರು ಸತ್ಯದರ್ಶನ ಅನುವಾದ ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿನಿ ಹಿತಾ ಉಮೇಶ್‌ರನ್ನು ಸನ್ಮಾನಿಸಲಾಯಿತು. ನಾರಾಯಣ ಗುರು ಪದವಿ ಪೂರ್ವ ಕಾಲೇಜು ಕಾಟಿಪಳ್ಳ ಉಪನ್ಯಾಸಕ ಧರ್ಮಪಾಲ ಎಂ.ಟಿ ನಾರಾಯಣಗುರು ಸತ್ಯದರ್ಶನದ ಬಗ್ಗೆ ಉಪನ್ಯಾಸ ನೀಡಿದರು.

ಪತ್ರಕರ್ತ ಯು.ಕೆ.ಕುಮಾರನಾಥ್, ಉಡುಪಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಗಣನಾಥ ಶೆಟ್ಟಿ ಎಕ್ಕಾರ್, ಉದ್ಯಮಿ ಕಡಂಬೋಡಿ ಮಹಾಬಲ ಪೂಜಾರಿ, ಕುಸುಮಾ ಮಹಾಬಲ ಪೂಜಾರಿ, ಕೊಣಾಜೆ ಉಳ್ಳಾಲ್ತಿ ಅಮ್ಮನವರ ಕ್ಷೇತ್ರದ ಪ್ರಸಾದ್ ರೈ ಕಲ್ಲಿಮಾರ್, ಎಳತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಸಂತೋಷ್ ಕುಮಾರ್ ಹೆಗ್ಡೆ, ಕಾಟಿಪಳ್ಳ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ದಯಾಕರ್ ಪಿ. ಕುಳಾಯಿ, ಸುರತ್ಕಲ್ ಗೋವಿಂದದಾಸ ಕಾಲೇಜು ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ, ಒರಿಯಂಟಲ್ ಇನ್ಸೂರೆನ್ಸ್ ಶಾಖಾ ಪ್ರಬಂಧಕ ಯಾದವ ದೇವಾಡಿಗಾ, ಲಯನ್ಸ್‌ನ ಗುಣವತಿ ರಮೇಶ್, ಯೋಜನಾಧಿಕಾರಿಗಳಾದ ರವಿಕಲಾ, ಅಕ್ಷತಾ ವಿ, ನಿನಾದ ನಿರ್ದೇಶಕರಾದ ಜಯಂತಿ ಸಂಕಮಾರ್, ಮಧುಕರ ಅಮೀನ್, ಚಂದ್ರಶೇಖರ ನಾನಿಲ್, ಭಾಸ್ಕರ ಸಾಲ್ಯಾನ್, ಧರ್ಮಪಾಲ್, ಅನು-ಭವ ಸಂಕಮಾರ್ ಇದ್ದರು.

ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು.

Mangaluru

**2. ತಿಂಗಳ ಬೆಳಕು: ನಾರಾಯಣ ಗುರುಗಳ ಶಿಕ್ಷಣ ಸಂದೇಶದ ಬಾನುಲಿ ಅಭಿಯಾನ:**






**3. ‘ಗುರುವಿನ ಗುರುತು’ ನುಡಿ ಕನ್ನಡಿ – ಫೇಸ್‌ಬುಕ್ ಮತ್ತು ಯು.ಟ್ಯೂಬ್ ನೇರಪ್ರಸಾರ ಕಾರ್ಯಕ್ರಮ:**




**4. ನಾರಾಯಣ ಗುರು ಸಂಶೋಧನಾ ಪ್ರಶಸ್ತಿ ಆಯೋಜನೆಯ ಪತ್ರಿಕಾ ತುಣುಕುಗಳು:**



ನಾರಾಯಣಗುರು ಸಂಶೋಧನಾ ಪ್ರಶಸ್ತಿ

ವಿಶ್ವವಿದ್ಯಾಲಯ ಸಂಯೋಜಿತ ಕಾಲೇಜುಗಳ ಉಪನ್ಯಾಸಕರಿಗೆ, ಸಂಶೋಧನಾ, ಸ್ನಾತಕೋತ್ತರ ಮತ್ತು ಹಳೆಯ ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ಮೀಸಲಾಗಿದೆ.

ಹಸ್ತಪ್ರತಿ ಆಹ್ವಾನ

ಕೊಣಾಜೆ(ಮಂಗಳಗಂಗೋತ್ರಿ): ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವು 2021ರಿಂದ 'ನಾರಾಯಣಗುರು ಸಂಶೋಧನಾ ಪ್ರಶಸ್ತಿ' ನೀಡುವ ಯೋಜನೆ ಪ್ರಕಟಿಸಿದೆ.

'ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಚಿಂತನೆಯ ಮೂಲಕ ನಾರಾಯಣ ಗುರುಗಳ ಸಮಾಜ ಸೇವೆ' ಎಂಬ ವಿಷಯದ ಕುರಿತು ಸಂಶೋಧನಾತ್ಮಕ ಅಧ್ಯಯನ ನಡೆಸುವ ಯೋಜನೆ ಇದಾಗಿದೆ. ಸಂಶೋಧನಾ ಬರವಣಿಗೆಯು ಗುರುಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವಚಿಂತನೆಗಳನ್ನು ಒಳಗೊಂಡಿರಬೇಕು. ಗರಿಷ್ಠ 60 ಸಾವಿರ ಪದಗಳಿಗೆ ಮೀರದಂತೆ ಮುದ್ರಣದಲ್ಲಿ ಹಾಗೂ ಕೃತಿಯಲ್ಲಿ 200 ಪುಟಗಳಿಗೆ ಹೊಂದುವಂತೆ ಇರಬೇಕು. ಪ್ರಶಸ್ತಿಯು ₹10 ಸಾವಿರ ನಗದು ಪುರಸ್ಕಾರ ಹೊಂದಿರುತ್ತದೆ.

ಸಂಶೋಧನಾ ಬರಹದ ಕರಡು ಪ್ರತಿಯನ್ನು 2021 ಜುಲೈ 31ರ ಒಳಗಾಗಿ ನಿರ್ದೇಶಕರು, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-574199 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸಿಕೊಡಬೇಕು. ಹೆಚ್ಚಿನ ಮಾಹಿತಿಗೆ 9845665807 ಸಂಪರ್ಕಿಸಬಹುದು. ಪ್ರಶಸ್ತಿ ಪ್ರಧಾನ ಸಮಾರಂಭವು ನಾರಾಯಣ ಗುರುಗಳ ಜನ್ಮದಿನದ ಸಂದರ್ಭದಲ್ಲಿ ಇರುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

# ನಾರಾಯಣ ಗುರು ಸಂಶೋಧನ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

**ಮಹಾನಗರ, ಫೆ. 23:** ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠವು 2021ರಿಂದ ನಾರಾಯಣ ಗುರು ಸಂಶೋಧನ ಪ್ರಶಸ್ತಿ ನೀಡುವ ಯೋಜನೆ ಆರಂಭಿಸಿದೆ. ಯುವ ಜನಾಂಗದಲ್ಲಿ ಶಿಕ್ಷಣ, ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಜಾಗೃತಿಯನ್ನು ಮೂಡಿಸುವ ಸಲುವಾಗಿ ವಿವಿ, ಸಂಯೋಜಿತ ಕಾಲೇಜುಗಳ ಉಪನ್ಯಾಸಕರಿಗೆ, ಸಂಶೋಧನ, ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿ ಗಳಿಗೆ, ಹಳೆ ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ಮೀಸಲಾಗಿದೆ. ನಾರಾಯಣ ಗುರುಗಳ ತತ್ವ ಸಂದೇಶಗಳನ್ನು ಅಧ್ಯಯನ, ಸಂಶೋಧನೆ ಮಾಡುವ ನಿಟ್ಟಿನಲ್ಲಿ 'ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಚಿಂತನೆಯ ಮೂಲಕ ನಾರಾಯಣ ಗುರುಗಳ ಸಮಾಜಸೇವೆ' ಎಂಬ ವಿಷಯದ ಕುರಿತು ಸಂಶೋಧನಾತ್ಮಕ ಅಧ್ಯಯನವನ್ನು ನಡೆಸುವ ಯೋಜನೆ ಇದಾಗಿದೆ.

**ನಿಬಂಧನೆಗಳು**

ಅಧ್ಯಯನವು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಆಯಾಮದ ನಿಯಮಕ್ಕೆ ಅನುಗುಣವಾಗಿರುತ್ತ ದೆ. ಸಂಶೋಧನ ಬರವಣಿಗೆಯು ಗುರುಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವ ಚಿಂತನೆಗಳನ್ನು ಒಳಗೊಂಡಿರಬೇಕು. ಗರಿಷ್ಠ 60,000 ಪದಗಳಿಗೆ ಮೀರದಂತೆ ಮುದ್ರಣದಲ್ಲಿ ಡೆಮಿ1/8 ಆಕಾರದ ಕೃತಿಯಲ್ಲಿ 200 ಪುಟಗಳಿಗೆ ಹೊಂದುವಂತೆ ಇರಬೇಕು. ಪ್ರಶಸ್ತಿಯು 10,000 ರೂ. ಮೊತ್ತದ ನಗದು ಹೊಂದಿರುತ್ತದೆ. ಕೃತಿಯ ಮೌಲ್ಯಮಾಪನ ಮತ್ತು ಪ್ರಶಸ್ತಿಯ ಆಯ್ಕೆಯು ವಿಶ್ವವಿದ್ಯಾನಿಲಯ ನಿಯೋಜಿತ ಆಯ್ಕೆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಕೃತಿಯ ಸಂಶೋಧನ ಬರಹದ ಕರಡು (ಹಾರ್ಡ್‌ಕಾಪಿ) ಪ್ರತಿಯನ್ನು 2021ರ ಜು. 31ರ ಒಳಗಾಗಿ ನಿರ್ದೇಶಕರು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸಬೇಕು. ಪ್ರಶಸ್ತಿ ಪ್ರದಾನ ನಾರಾಯಣ ಗುರುಗಳ ಜನ್ಮದಿನದ ಸಂದರ್ಭದಲ್ಲಿ ಇರುತ್ತದೆ ಎಂದು ಪ್ರಕಟನೆ ತಿಳಿಸಿದೆ.

# ಸಂಶೋಧನಾ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

ಮೂಲ್ಕಿ: ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ 2021ರಿಂದ ನಾರಾಯಣಗುರು ಸಂಶೋಧನಾ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನಿಸಿದೆ.

ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು, ಸ್ನಾತಕೋತ್ತರ ವಿಭಾಗ ವಿದ್ಯಾರ್ಥಿಗಳು, ಹಳೇ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಮೀಸಲಾಗಿದೆ. ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಚಿಂತನೆ ಮೂಲಕ ನಾರಾಯಣಗುರುಗಳ ಸಮಾಜ ಸೇವೆ ವಿಷಯವನ್ನು ಸಂಶೋಧನಾ ಅಧ್ಯಯನ ಹೊಂದಿರಬೇಕು. ಅಧ್ಯಯನವು ವಿವಿ ಶೈಕ್ಷಣಿಕ ಆಯಾಮದ ನಿಯಮಕ್ಕೆ ಅನುಗುಣವಾಗಿರಬೇಕು.

ಗರಿಷ್ಠ 60 ಸಾವಿರ ಪದ ಮೀರದಂತೆ ಮುದ್ರಣದಲ್ಲಿ ಡೆಮಿ 1/8 ಆಕಾರದ 200 ಪುಟಗಳಿಗೆ ಹೊಂದುವಂತೆ ಇರಬೇಕು. ಪ್ರಶಸ್ತಿ ಮೊತ್ತ 10 ಸಾವಿರ ರೂ. ಆಗಿದ್ದು, ಕೃತಿಯ ಮೌಲ್ಯಮಾಪನ ಮತ್ತು ಪ್ರಶಸ್ತಿ ಆಯ್ಕೆ ಆಯ್ಕೆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿದೆ. ಸಂಶೋಧನಾ ಬರಹದ ಕರಡು ಪ್ರತಿಯನ್ನು ಜುಲೈ 31ರೊಳಗೆ ಮಂಗಳೂರು ವಿಶ್ವವಿದ್ಯಾಲಯ, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳ ಗಂಗೋತ್ರಿ- 574199 ಇಲ್ಲಿಗೆ ತಲುಪಿಸಬೇಕು. ಮಾಹಿತಿಗೆ: 9845665807.

**6. ಗುರು ಜಯಂತಿ–2021** **23.08.2021**



ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮಂಗಳಗಂಗೋತ್ರಿ – ೫೭೪ ೧೯೯

ಬ್ರಹ್ಮಶ್ರೀ ನಾರಾಯಣ ಗುರುಗಳ 167ನೇ
ಜನ್ಮದಿನಾಚರಣೆ ಮತ್ತು ವಿಶೇಷ ಉಪನ್ಯಾಸ

ಉದ್ಘಾಟನೆ ಮತ್ತು ಅಧ್ಯಕ್ಷತೆ
**ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**
ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

ವಿಶೇಷ ಉಪನ್ಯಾಸ
**ಶ್ರೀ ಮುದ್ದು ಮೂಡುಬೆಳ್ಳೆ**
ಹಿರಿಯ ಸಾಹಿತಿ ಮತ್ತು ವಿದ್ವಾಂಸರು

**ವಿಷಯ : ನಾರಾಯಣಗುರುಗಳ ಅಧ್ಯಾತ್ಮ ತತ್ತ್ವ**

ಮುಖ್ಯ ಅತಿಥಿಗಳು
**ಶ್ರೀ ಎಂ.ಪಿ. ನೋರೊನ್ಹಾ**
ನ್ಯಾಯವಾದಿ, ಮಂಗಳೂರು
**ಶ್ರೀ ದಯಾಕರ್ ಕುಳಾಯಿ**
ಅಧ್ಯಕ್ಷರು, ಬ್ರಹ್ಮಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆ, ಕಾಟಿಪಳ್ಳ
**ಶ್ರೀ ಚಂದ್ರಹಾಸ ಅಮೀನ್ ಖಂಡಿಗ,** ಅಧ್ಯಕ್ಷರು
ಬ್ರಹ್ಮಶ್ರೀ ನಾರಾಯಣಗುರು ಸಮಾಜ ಸೇವಾ ಸಂಘ(ರಿ), ಕೊಣಾಜೆ

**ತಮಗೆಲ್ಲರಿಗೂ ಆತ್ಮೀಯ ಸ್ವಾಗತ**
**ಡಾ. ಕಿಶೋರ್ ಕುಮಾರ್ ಸಿ.ಕೆ.**
ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ
**ಡಾ. ಗಣೇಶ್ ಅಮೀನ್ ಸಂಕಮಾರ್**
ಸಂಯೋಜಕರು, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ

**ಶ್ರೀ ಮೋಹನ್ ಪಡಿವಾಳ್, ಶ್ರೀ ಕೆ. ಮೋಹನ್‌ಚಂದ್ರ ನಂಬಿಯಾರ್, ಶ್ರೀ ಪಿ.ವಿ. ಮೋಹನ್, ಶ್ರೀ ವಿಜಯಕುಮಾರ್ ಸೊರಕೆ, ಶ್ರೀ ಬಾಬು ಶಿವ ಪೂಜಾರಿ, ಶ್ರೀ ಸತೀಶ್ ಎನ್. ಕರ್ಕೇರ, ಶ್ರೀಮತಿ ನಮಿತಾ ಶಾಮ್, ಶ್ರೀ ಮೋಹನ್‌ರಾಜ್ ಕೆ.ಆರ್.**
ಸದಸ್ಯರು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ

**ಸಾಕ್ಷಿ : ಶ್ರೀ ನಾರಾಯಣಗುರು ಅನುದಾನಿತ ಕನ್ನಡ ಮಾಧ್ಯಮ ಪ್ರೌಢಶಾಲೆ, ಕಾಟಿಪಳ್ಳ ಇಲ್ಲಿಯ ವಿದ್ಯಾರ್ಥಿಗಳು**

ದಿನಾಂಕ :
23–8–2021
ಸೋಮವಾರ
ಬೆಳಿಗ್ಗೆ 10–00 ರಿಂದ
ಸ್ಥಳ :
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಭಾಂಗಣ
(ವಿಶ್ವವಿದ್ಯಾನಿಲಯ ಸಾಂಸ್ಕೃತಿಕ ವಸ್ತುಸಂಗ್ರಹಾಲಯದ ಮೊದಲ ಮಹಡಿ)

https://www.facebook.com/university.mangalore
https://youtu.be/rQRKJ3ZeKDE

ಕಾರ್ಯಕ್ರಮ ಕೋವಿಡ್ ನಿಯಮದನ್ವಯ ನಡೆಯುತ್ತದೆ.

**23.08.2021 ಗುರು ಜಯಂತಿ ಆಹ್ವಾನ ಪತ್ರಿಕೆ**

**23.08.2021 ದೀಪ ಬೆಳಗುವುದರ ಮೂಲಕ ಗುರು ಜಯಂತಿ–2021 ಕ್ಕೆ ಚಾಲನೆ ನೀಡಿದ ವಿ.ವಿ. ಕುಲಸಚಿವರಾದ ಡಾ. ಕಿಶೋರ್ ಕುಮಾರ್ ಸಿ.ಕೆ.**

**23.08.2021 ವಿ.ವಿ. ಕುಲಸಚಿವರಾದ ಡಾ. ಕಿಶೋರ್ ಕುಮಾರ್ ಸಿ.ಕೆ. ಇವರಿಂದ ಉದ್ಘಾಟನಾ ಭಾಷಣ**

ನಾರಾಯಣ ಗುರು ಜಯಂತಿ - 2021 - (23.08.2021)

24-8-2021

## ಮಂಗಳೂರು ವಿವಿ ಕುಲಸಚಿವ ಡಾ. ಕಿಶೋರ್ ಕುಮಾರ್ ಬಣ್ಣನೆ

# ಸಮಾನತೆಗಾಗಿ ಹೋರಾಡಿದ ಸಂತ

**ಮಂಗಳೂರು ವಿವಿಯಲ್ಲಿ ನಾರಾಯಣ ಗುರು ಜಯಂತಿ ಆಚರಣೆ**



**ಕೊಣಾಜೆ:** 19ನೇ ಶತಮಾನದಲ್ಲಿ ಶಿಕ್ಷಣದೊಂದಿಗೆ ಸಾಮಾಜಿಕ ಕ್ರಾಂತಿಯನ್ನು ಮಾಡುವ ಮೂಲಕ ಶೋಷಿತ ಮತ್ತು ಹಿಂದುಳಿದ ಸಮಾಜಕ್ಕೆ ಸಮಾನತೆ ಒದಗಿಸಿಕೊಟ್ಟವರು ಬ್ರಹ್ಮಶ್ರೀ ನಾರಾಯಣ ಗುರುಗಳು. ಇಂತಹ ಮಹಾತ್ಮರ ಆದರ್ಶವನ್ನು ಪಾಲಿಸುವವರು ನಿಜವಾದ ಶ್ರೀಮಂತರಾಗಿದ್ದಾರೆ ಎಂದು ಮಂಗಳೂರು ವಿವಿ ಕುಲಸಚಿವ ಡಾ. ಕಿಶೋರ್ ಕುಮಾರ್ ಸಿ. ಕೆ. ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದಸಂಯೋಜನೆಯಲ್ಲಿಸೋಮವಾರ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮದಲ್ಲಿ, ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ಮುದ್ದು ಮೂಡಬೆಳ್ಳೆ, ಬ್ರಹ್ಮಶ್ರೀ ನಾರಾಯಣ ಗುರುಗಳ ಬದುಕು ಬರಹ ಚಿಂತನೆ ವಿಶ್ವಕ್ಕೆ ದಾರಿದೀಪವಾಗಿದೆ. ಅವರ ತತ್ವ ಸಂದೇಶಗಳನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ ಎಂದರು.

ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ದಯಾಕರ ಕುಳಾಯಿ, ಕೊಣಾಜೆ ಗ್ರಾಮಚಾವಡಿಯ ಬ್ರಹ್ಮಶ್ರೀ ನಾರಾಯಣ ಗುರುಸೇವಾ ಸಂಘದ ಅಧ್ಯಕ್ಷ ಚಂದ್ರಹಾಸ್ ಅಮೀನ್ ಖಂಡಿಗ ಉಪಸ್ಥಿತರಿದ್ದರು.

ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ರಕ್ಷಾ ಹರೀಶ್ ನಾರಾಯಣ ಗುರುಗಳ ಕುರಿತಾದ ಗೀತೆಗಳನ್ನು ಹಾಡಿದರು. ಪೀಠದ ಸದಸ್ಯರಾದ ನಮಿತಾ ಶ್ಯಾಮ್ ವಂದಿಸಿದರು. ಸಂಶೋಧನಾ ವಿದ್ಯಾರ್ಥಿಗಳಾದ ಅನು,ಭವ ಸಂಕಮಾರ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮಕ್ಕೆ ಸಾಕ್ಷಿಯಾದ ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ರಸಪ್ರಶ್ನೆ ಸ್ಪರ್ಧೆಯಲ್ಲಿ ಪಾಲ್ಗೊಂಡರು.

# ಮನುಷ್ಯ ಧರ್ಮ ಪ್ರತಿಪಾದಿಸಿದ ಸಂತ

## ಗುರು ಜಯಂತಿ ಕಾರ್ಯಕ್ರಮದಲ್ಲಿ ಕುಲಸಚಿವ ಡಾ.ಕಿಶೋರ್ ಕುಮಾರ್

ಪ್ರಜಾವಾಣಿ ವಾರ್ತೆ

ಮುಡಿಪು: '19ನೇ ಶತಮಾನದಲ್ಲಿ ಶಿಕ್ಷಣದೊಂದಿಗೆ ಸಾಮಾಜಿಕ ಕ್ರಾಂತಿಯನ್ನು ಮಾಡುವ ಮೂಲಕ ಶೋಷಿತ ಮತ್ತು ಹಿಂದುಳಿದ ಸಮಾಜಕ್ಕೆ ಸಮಾನತೆ ಒದಗಿಸಿಕೊಟ್ಟವರು ನಾರಾಯಣ ಗುರುಗಳು. ಇಂತಹ ಮಹಾತ್ಮರ ಆದರ್ಶ ಪಾಲಿಸುವವರು ನಿಜವಾದ ಶ್ರೀಮಂತರು' ಎಂದು ಮಂಗಳೂರು ವಿವಿ ಕುಲಸಚಿವ ಡಾ.ಕಿಶೋರ್ ಕುಮಾರ್ ಸಿ.ಕೆ. ಹೇಳಿದರು

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ಸೋಮವಾರ ನಡೆದ ಗುರು ಜಯಂತಿಯಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಮಂಗಳೂರು ವಿವಿಯಲ್ಲಿ ನಾರಾಯಣ ಗುರು ಜಯಂತಿ ಕಾರ್ಯಕ್ರಮ ಸೋಮವಾರ ನಡೆಯಿತು

ಸಾಹಿತಿ ಮುದ್ದು ಮೂಡಬೆಳ್ಳೆ ಮಾತನಾಡಿ, 'ಬ್ರಹ್ಮಶ್ರೀ ನಾರಾಯಣ ಗುರುಗಳ ಬದುಕು ಬರಹ ಚಿಂತನೆ ವಿಶ್ವಕ್ಕೆ ದಾರಿದೀಪವಾಗಿದೆ. ಅವರ ತತ್ವ ಸಂದೇಶಗಳನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ' ಎಂದರು.

ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣ ಗುರು ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ದಯಾಕರ ಕುಳಾಯಿ, ಕೊಣಾಜೆ ಗ್ರಾಮಚಾವಡಿಯ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷ ಚಂದ್ರಹಾಸ್ ಅಮೀನ್ ಖಂಡಿಗೆ ಉಪಸ್ಥಿತರಿದ್ದರು.

ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ರಕ್ಷಾ ಹರೀಶ್ ನಾರಾಯಣ ಗುರುಗಳ ಕುರಿತಾದ ಗೀತೆಗಳನ್ನು ಹಾಡಿದರು.

ಪೀಠದ ಸದಸ್ಯರಾದ ನಮಿತಾ ಶ್ಯಾಮ್ ವಂದಿಸಿದರು. ಸಂಶೋಧನಾ ವಿದ್ಯಾರ್ಥಿಗಳಾದ ಅನು-ಭವ ಸಂಕಮಾರ್ ಕಾರ್ಯಕ್ರಮ ನಿರೂಪಿಸಿದರು.

ಕಾಟಿಪಳ್ಳ ನಾರಾಯಣ ಗುರು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ರಸಪ್ರಶ್ನೆ ಸ್ಪರ್ಧೆಯಲ್ಲಿ ಪಾಲ್ಗೊಂಡರು.



# ನಾರಾಯಣಗುರುಗಳು ಮನುಷ್ಯ ಧರ್ಮ ಸಾರಿದ ಸಂತ: ಡಾ। ಕಿಶೋರ್

ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಲಾಯಿತು.

**ಮಂಗಳಗಂಗೋತ್ರಿ, ಆ. 23:** ಶಿಕ್ಷಣದ ಮೂಲಕ ಸಾಮಾಜಿಕ ಕ್ರಾಂತಿಯನ್ನು ಮಾಡುವುದರೊಂದಿಗೆ ಶೋಷಿತ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಸಮಾನತೆಯನ್ನು ದೊರಕಿಸಿಕೊಟ್ಟ ದಾರ್ಶನಿಕ, ಮನುಷ್ಯ ಧರ್ಮವನ್ನು ಪ್ರತಿಪಾದಿಸಿದ ಸಂತ ಬ್ರಹ್ಮಶ್ರೀ ನಾರಾಯಣ ಗುರುಗಳು ವರ್ತಮಾನದ ಮುನ್ನುಡಿ ಭವಿಷ್ಯದ ಕನ್ನಡಿ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ। ಕಿಶೋರ್ ಕುಮಾರ್ ಸಿ.ಕೆ. ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ನಡೆದ ನಾರಾಯಣ ಗುರುಗಳ 167ನೇ ಜಯಂತಿ ಆಚರಣೆ, ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶೇಷ ಉಪನ್ಯಾಸವನ್ನು ನೀಡಿದ ಹಿರಿಯ ಸಾಹಿತಿ ಮುದ್ದು ಮೂಡುಬೆಳ್ಳೆ ನಾರಾಯಣ ಗುರುಗಳ ಬದುಕು, ಬರಹ, ಚಿಂತನೆಗಳು ವಿಶ್ವಕ್ಕೆ ದಾರಿದೀಪ. ಅವರ ತತ್ತ್ವ ಸಂದೇಶಗಳನ್ನು ಯುವ ಸಮುದಾಯ ಅಧ್ಯಯನ ಮಾಡಬೇಕಾದುದು ಪ್ರಸ್ತುತ ಪರಿಸ್ಥಿತಿಯಲ್ಲಿ ಅನಿವಾರ್ಯ ಎಂದರು.

ಮುಖ್ಯ ಅತಿಥಿಗಳಾಗಿ ಕಾಟಿಪಳ್ಳದ ಬ್ರಹ್ಮಶ್ರೀ [illegible] ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ದಯಾಕರ ಪಿ. ಕುಳಾಯಿ, ಕೊಣಾಜೆ ಗ್ರಾಮಚಾವಡಿಯ ಬ್ರಹ್ಮಶ್ರೀ ನಾರಾಯಣಗುರು ಸಮಾಜಸೇವಾ ಸಂಘದ ಅಧ್ಯಕ್ಷ ಚಂದ್ರಹಾಸ ಅಮೀನ್ ಖಂಡಿಗ ಭಾಗವಹಿಸಿದ್ದರು. ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಶ್ರೀರಕ್ಷಾ ಹರೀಶ್ ನಾರಾಯಣ ಗುರುಗಳ ಗೀತೆಯನ್ನು ಹಾಡಿದರು. ನಮಿತಾ ಶ್ಯಾಮ್ ವಂದಿಸಿದರು. ಅನುಭವ ಸಂಕಮಾರ್ ನಿರ್ವಹಿಸಿದರು. ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

---

**ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2022-23ನೇ ಸಾಲಿನ ಕಾರ್ಯಚಟುವಟಿಕೆಗಳ ವರದಿ**

**ಭಾರತದ ಸಂತ ಸತ್ವ 2022–23ನೇ ಸಾಲಿನ ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನ**




**2022–23ನೇ ಸಾಲಿನ ನಾರಾಯಣಗುರು ಶಿಕ್ಷಣ ಸಂದೇಶ ಅಭಿಯಾನದ ಆಹ್ವಾನ ಪತ್ರಿಕೆ**

**06.04.2022 ಭಾರತದ ಸಂತ ಸತ್ವಗಳು ಶಿಕ್ಷಣ ಅಭಿಯಾನದ ಉದ್ಘಾಟನೆ ಕ್ಯಾ. ಗಣೇಶ್ ಕಾರ್ಣಿಕ್ ಹಾಗೂ ಗಣ್ಯರಿಂದ**

**ಭಾರತದ ಸಂತ ಸತ್ವಗಳು ಉಪನ್ಯಾಸ–2, ಗೋವಾ** 01.05.2022





01.05.2022 ಪೀಠದ ನಿರ್ದೇಶಕರಾದ ಡಾ. ಗಣೇಶ್ ಅಮೀನ್ ಸಂಕಮಾರ್ ಇವರಿಂದ ವಿಶೇಷ ಉಪನ್ಯಾಸ




01.05.2022 ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡ ಗೋವಾ ಬಿಲ್ಲವ ಅಸೋಸಿಯೇಶನ್‌ನ ಪದಾಧಿಕಾರಿಗಳು ಪೀಠದ ನಿರ್ದೇಶಕರು ಹಾಗೂ ವಿದ್ಯಾರ್ಥಿಗಳು




**26.07.2022 ರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರಿಂದ ವಿಶೇಷ ಉಪನ್ಯಾಸ**



**26.07.2022 ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೋವಿಂದ ದಾಸ ಕಾಲೇಜಿನ ವಿದ್ಯಾರ್ಥಿಗಳು**



# ನಾರಾಯಣಗುರುಗಳು ನಮ್ಮ ರಾಷ್ಟ್ರದ ಸಂತ ಸತ್ವ

**ಕೊಣಾಜೆ:** 19ನೇ ಶತಮಾನದ ದಾರ್ಶನಿಕ ಮಾನವತಾವಾದಿ ಬ್ರಹ್ಮಶ್ರೀ ನಾರಾಯಣಗುರುಗಳು ನಮ್ಮ ರಾಷ್ಟ್ರದ ಸಂತಸತ್ವ. ಅವರ ಸಂದೇಶಗಳು ದೇಶಕ್ಕೆ ಮಾತ್ರವಲ್ಲ ಮನುಕುಲದ ಏಳಿಗೆಗೆ ಪೂರಕ. ಅದು ವಿಶ್ವ ಶಕ್ತಿಯ ಸತ್ವ ಎಂದು ಚಿಂತಕ ಮಂಗಳೂರು ವಿವಿರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯ ದಿನಕರ್ ಉಳ್ಳಾಲ್ ಅಭಿಪ್ರಾಯಪಟ್ಟರು.

ಸುರತ್ಕಲ್ ಗೋವಿಂದದಾಸ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ನಡೆಯುತ್ತಿರುವ ಭಾರತದ ಸಂತಸತ್ವ ಎಂಬ ಪರಿಕಲ್ಪನೆಯಡಿಯಲ್ಲಿ ನಡೆಯುತ್ತಿರುವ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಕೃಷ್ಣಮೂರ್ತಿ ಮಾತನಾಡಿ, ನಾರಾಯಣಗುರುಗಳಂತಹ ಸಂತಸತ್ವದ ಅನಾವರಣ ಅಮೃತ ಮಹೋತ್ಸವದ ಸಂಚಲನ ಎಂದರು.

ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉಪನ್ಯಾಸಕಿ ಸುಧಾ ಯು. ನಿರೂಪಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ದಯಾ ಸುವರ್ಣ ವಂದಿಸಿದರು. ಕಾಲೇಜು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ನಡೆಯಿತು.

ವಿಜಯ ಕರ್ನಾಟಕ - 29-07-2022

ಉದಯವಾಣಿ - 29-07-2022

ಮಂಗಳೂರು ವಿ.ವಿ.: ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ

# ಬ್ರಹ್ಮಶ್ರೀ ನಾರಾಯಣ ಗುರುಗಳು ರಾಷ್ಟ್ರದ ಸಂತ: ದಿನಕರ ಉಳ್ಳಾಲ



ಮಂಗಳಗಂಗೋತ್ರಿ, ಜು. 28: 19ನೇ ಶತಮಾನದ ದಾರ್ಶನಿಕ ಮಾನವ ತಾವಾದಿ ಬ್ರಹ್ಮಶ್ರೀ ನಾರಾಯಣ ಗುರುಗಳು ನಮ್ಮ ರಾಷ್ಟ್ರದ ಸಂತ ಸತ್ವ. ಅವರ ಸಂದೇಶಗಳು ದೇಶಕ್ಕೆ ಮಾತ್ರವಲ್ಲ ಮನುಕುಲದ ಏಳಿಗೆಗೆ ಪೂರಕ. ಅದು ವಿಶ್ವ ಶಕ್ತಿಯ ಸತ್ವ ಎಂದು ಚಿಂತಕ ಮಂಗಳೂರು ವಿಶ್ವವಿದ್ಯಾನಿಲಯದ ರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯ ದಿನಕರ ಉಳ್ಳಾಲ ಅಭಿಪ್ರಾಯಪಟ್ಟರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜಿನಲ್ಲಿ ಆಯೋಜಿಸಿದ್ದ ಭಾರತದ ಸಂತಸತ್ವ ಎಂಬ ಪರಿಕಲ್ಪನೆಯ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ। ಕೃಷ್ಣಮೂರ್ತಿ ವಹಿಸಿ ನಾರಾಯಣ ಗುರುಗಳಂತಹ ಸಂತರ ಸಂತಸತ್ವದ ಅನಾವರಣ ಅಮೃತ ಮಹೋತ್ಸವದ ಸಂಚಲನ. ಇಂತಹ ಉಪನ್ಯಾಸ ಯೋಜನೆ ಯುವ ಜನಾಂಗಕ್ಕೆ ಪ್ರೇರಣೆ ಎಂದರು.

ಅಧ್ಯಯನ ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಸುಧಾ ಯು. ಕಾರ್ಯಕ್ರಮ ನಿರ್ವಹಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ದಯಾ ಸುವರ್ಣ ವಂದಿಸಿದರು.

ಕಾಲೇಜು ವಿದ್ಯಾರ್ಥಿಗಳು ಸಮಾರಂಭಕ್ಕೆ ಸಾಕ್ಷಿಯಾಗಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

# ಮನುಕುಲದ ಏಳಿಗೆಗೆ ಗುರು ಸಂದೇಶ

## ರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯ ದಿನಕರ ಉಳ್ಳಾಲ್ ಅನಿಸಿಕೆ



ಸುರತ್ಕಲ್ ಗೋವಿಂದದಾಸ ಕಾಲೇಜಿನಲ್ಲಿ ಭಾರತದ ಸಂತಸತ್ವ ಉಪನ್ಯಾಸ ಕಾರ್ಯಕ್ರಮವನ್ನು ಮಂಗಳೂರು ವಿವಿ ರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯ ದಿನಕರ ಉಳ್ಳಾಲ್ ಉದ್ಘಾಟಿಸಿದರು. ಪ್ರಾಂಶುಪಾಲ ಪ್ರೊ. ಕೃಷ್ಣಮೂರ್ತಿ, ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಹಳೆಯಂಗಡಿ

ಬ್ರಹ್ಮಶ್ರೀ ನಾರಾಯಣ ಗುರುಗಳ ಸಂದೇಶಗಳು ದೇಶಕ್ಕೆ ಮಾತ್ರವಲ್ಲ, ಮನುಕುಲದ ಏಳಿಗೆಗೆ ಪೂರಕ. ಅದು ವಿಶ್ವ ಶಕ್ತಿಯ ಸತ್ವ ಎಂದು ಮಂಗಳೂರು ವಿಶ್ವವಿದ್ಯಾಲಯದ ರಾಣಿ ಅಬ್ಬಕ್ಕ ಅಧ್ಯಯನ ಪೀಠದ ಸದಸ್ಯ ದಿನಕರ ಉಳ್ಳಾಲ್ ಹೇಳಿದರು.

### ಭಾರತದ ಸಂತಸತ್ವ ಪರಿಕಲ್ಪನೆಯ ಸರಣಿ ಉಪನ್ಯಾಸ

ಸುರತ್ಕಲ್ ಗೋವಿಂದದಾಸ ಕಾಲೇಜಿನಲ್ಲಿ ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಹಯೋಗದಲ್ಲಿ ಭಾರತದ ಸಂತಸತ್ವ ಎಂಬ ಪರಿಕಲ್ಪನೆಯ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಂಶುಪಾಲ ಪ್ರೊ. ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಸುಧಾ ಯು. ಕಾರ್ಯಕ್ರಮ ನಿರ್ವಹಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ದಯಾ ಸುವರ್ಣ ವಂದಿಸಿದರು.

ವಿಜಯವಾಣಿ - 01-08-2022

**ಭಾರತದ ಸಂತ ಸತ್ವಗಳು ಉಪನ್ಯಾಸ–4, ಮುಲ್ಕಿ 30.07.2022**



**30.07.2022 ಮುಲ್ಕಿಯಲ್ಲಿ ನಡೆದ ಭಾರತದ ಸಂತ ಸತ್ವಗಳು ಉಪನ್ಯಾಸ–4ರ ಉದ್ಘಾಟನೆ: ಡಾ. ರಾಜಶೇಖರ್ ಕೋಟ್ಯಾನ್ ಅವರಿಂದ**

# ಭಾರತದ ಸಂತ ಸತ್ವಗಳ ಲೋಕಾರ್ಪಣೆ



ಮೂಲ್ಕಿಯಲ್ಲಿ ಸರಣಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಎಚ್.ವಿ.ಕೋಟ್ಯಾನ್ ಉದ್ಘಾಟಿಸಿದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಭಾಸ್ಕರ್ ಮುದ್ದು ಸಾಲ್ಯಾನ್, ಬಿಲ್ಲವ ಮಹಾಮಂಡಲ ಉಪಾಧ್ಯಕ್ಷ ಸೂರ್ಯಕಾಂತ್, ಕಾರ್ಯದರ್ಶಿ, ವಿಜಯಕುಮಾರ್ ಕುಬೇವೂರು ಮೊದಲಾದವರಿದ್ದರು.

## ಶಿಕ್ಷಣ ತಜ್ಞ ಡಾ.ವಸಂತ ಕುಮಾರ್ ಶ್ಲಾಘನೆ

**ಮೂಲ್ಕಿ:** ಭಾರತದ ಸಂತ ಸತ್ವಗಳ ಲೋಕಾರ್ಪಣೆಯಾಗುತ್ತಿದ್ದು ವಿದ್ಯಾರ್ಥಿಗಳ ಬಳಿಗೆ ನಾರಾಯಣಗುರುಗಳ ತತ್ವವನ್ನು ಕೊಂಡೊಯ್ಯುವ ಮೂಲಕ ಶಿಕ್ಷಣದ ಮಹತ್ವವನ್ನು ಯುವ ಜನಾಂಗಕ್ಕೆ ತಿಳಿಸುವಂತಾಗಿದೆ ಎಂದು ಶಿಕ್ಷಣ ತಜ್ಞ ಡಾ.ವಸಂತಕುಮಾರ್ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ನಾರಾಯಣಗುರು ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಮೂಲ್ಕಿಯಲ್ಲಿ ಸರಣಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಭಾಸ್ಕರ್ ಮುದ್ದು ಸಾಲ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸಂಚಾಲಕ ಎಚ್.ವಿ. ಕೋಟ್ಯಾನ್ ಕಾರ್ಯಕ್ರಮ ಉದ್ಘಾಟಿಸಿದರು. ಬಿಲ್ಲವ ಮಹಾಮಂಡಲ ಉಪಾಧ್ಯಕ್ಷ ಸೂರ್ಯಕಾಂತ್, ಕಾರ್ಯದರ್ಶಿ, ವಿಜಯಕುಮಾರ್ ಕುಬೇವೂರು, ರಮೇಶ್ ಅಮೀನ್ ಕೊಕ್ಕರಕಲ್, ರಂಗಕರ್ಮಿ ಚಂದ್ರಶೇಖರ ಸುವರ್ಣ, ಸಂಸ್ಥೆಯ ಟ್ರಸ್ಟಿಗಳಾದ ಹರೀಂದ್ರ ಸುವರ್ಣ, ಹೇಮರಾಜ್, ಬಾಲಚಂದ್ರ ಸನಿಲ್, ಯೋಗೀಶ್ ಕೋಟ್ಯಾನ್ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಯತೀಶ್ ಅಮೀನ್ ಮತ್ತು ಕೇಶವ ರಸಪ್ರಶ್ನೆ ಕಾರ್ಯಕ್ರಮ ನಡೆಸಿದರು. ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕ ರಮೇಶ್ ವಂದಿಸಿದರು.

[illegible] - 01-08-2022

# ವಿವಿಯಿಂದ ಸಂತ ಸತ್ವದ ಲೋಕಾರ್ಪಣೆ

**ವಿಕ ಸುದ್ದಿಲೋಕ ಮೂಲ್ಕಿ**



ವಿಶ್ವವಿದ್ಯಾಲಯವು ಗುರು ತತ್ವದ ಪ್ರಸರಣದ ಮೂಲಕ ಯುವ ಜನಾಂಗದ ಮನಸ್ಸು ಕಟ್ಟುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದುದು ಎಂದು ಮೂಲ್ಕಿ ನಾರಾಯಣಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮುಂಬಯಿ ಉದ್ಯಮಿ ಭಾಸ್ಕರ ಸಾಲ್ಯಾನ್ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ಮೂಲ್ಕಿ ನಾರಾಯಣಗುರು ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ ಮೂಲ್ಕಿಯಲ್ಲಿ ಶನಿವಾರ ನಡೆಸಿದ 2022ರ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಣ ಸಂಸ್ಥೆಯ ಸಂಚಾಲಕ ಎಚ್.ವಿ. ಕೋಟ್ಯಾನ್ ಕಾರ್ಯಕ್ರಮ ಉದ್ಘಾಟಿಸಿ, ಶುಭ ಹಾರೈಸಿದರು. ಮೂಲ್ಕಿ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ. ವಸಂತ ಕುಮಾರ್, ರಾಷ್ಟ್ರೀಯ ಬಿಲ್ಲವರ ಮಹಾ ಮಂಡಲದ ಉಪಾಧ್ಯಕ್ಷ ಸೂರ್ಯ ಕಾಂತ್ ಜೆ. ಸುವರ್ಣ, ಕಾರ್ಯದರ್ಶಿ ವಿಜಯಕುಮಾರ್ ಕುಬೆವೂರು, ಮೂಲ್ಕಿ ಬಿಲ್ಲವ ಸಂಘದ ಅಧ್ಯಕ್ಷ ರಮೇಶ್ ಅಮೀನ್ ಕೊಕ್ಕರಕಲ್, ಮೂಲ್ಕಿ ಸುವರ್ಣ ಆರ್ಟ್ಸ್ ಆಡಳಿತ ನಿರ್ದೇಶಕ ಚಂದ್ರಶೇಖರ ಸುವರ್ಣ, ಶಿಕ್ಷಣ ಸಂಸ್ಥೆಯ ಟ್ರಸ್ಟಿಗಳಾದ ಹರೀಂದ್ರ ಎಸ್. ಸುವರ್ಣ, ಹೇಮರಾಜ್, ಬಾಲಚಂದ್ರ ಸನಿಲ್, ಯೋಗೀಶ್ ಕೋಟ್ಯಾನ್ ಚಿತ್ರಾಪು ಮುಖ್ಯ ಅತಿಥಿಗಳಾಗಿದ್ದರು. ಉಪನ್ಯಾಸಕರಾದ ಯತೀಶ್ ಅಮೀನ್ ಮತ್ತು ಕೇಶವ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು.

ಅಧ್ಯಯನ ಪೀಠದ ನಿರ್ದೇಶಕ ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕ ರಮೇಶ್ ವಂದಿಸಿದರು.

## ಮಂಗಳೂರು ವಿ.ವಿ: ಸಂತ ಸತ್ವ ಸರಣಿ

# ‘ಶಿಕ್ಷಣದ ಮಹತ್ವ ಯುವಜನಾಂಗಕ್ಕೆ ತಿಳಿಸಿ’



**ಮೂಲ್ಕಿ ಜು. 30:** ವಿ.ವಿ. ನಾರಾಯಣ ಗುರು ಅಧ್ಯಯನ ಪೀಠದ ಮೂಲಕ ನಾರಾಯಣ ಗುರುಗಳು ಪ್ರತಿಪಾದಿಸಿದ ಶಿಕ್ಷಣದ ಮಹತ್ವ ವನ್ನು ಯುವ ಜನಾಂಗಕ್ಕೆ ಮುಟ್ಟಿಸುವ ಕೆಲಸ ನಡೆಸಲಾಗುತ್ತಿದೆ ಎಂದು ಶ್ರೀ ನಾರಾಯಣ ಗುರು ಆಂಗ್ಲಮಾಧ್ಯಮ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ। ವಸಂತ್ ಕುಮಾರ್ ಹೇಳಿರು.

ಅವರು ಮಂಗಳೂರು ವಿಶ್ವ ವಿದ್ಯಾನಿಲಯದ ಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ನಡೆದ ಭಾರತದ ಸಂತ ಸತ್ವದ ಸರಣಿ -2022 ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಉದ್ಯಮಿ ಭಾಸ್ಕರ ಎಂ. ಸಾಲ್ಯಾನ್ ಮಾತನಾಡಿ, ಮಂಗಳೂರು ವಿಶ್ವ ವಿದ್ಯಾನಿಲಯವು ಗುರು ತತ್ವದ ಪ್ರಸರಣದಿಂದ ವಿದ್ಯಾರ್ಥಿಗಳ ಸುಂದರವಾದ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಸಂಸ್ಥೆಯ ಸಂಚಾಲಕ ಎಚ್.ವಿ. ಕೋಟ್ಯಾನ್ ಕಾರ್ಯಕ್ರಮ ಉದ್ಘಾಟಿಸಿ ಗುರು ಚಿಂತನೆ ಕುರಿತು ಮಾತನಾಡಿದರು. ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು.

ರಾಷ್ಟ್ರೀಯಬಿಲ್ಲವರಮಹಾಮಂಡಲದ ಉಪಾಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ, ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರ್ ಕುಬೆವೂರು, ಬಿಲ್ಲವ ಸಂಘದ ಅಧ್ಯಕ್ಷ ರಮೇಶ್ ಅಮೀನ್ ಕೊಕ್ಕರ್‌ಕಲ್, ಸುವರ್ಣ ಆರ್ಟ್ಸ್‌ನ ಚಂದ್ರಶೇಖರ್ ಸುವರ್ಣ, ಶಿಕ್ಷಣ ಸಂಸ್ಥೆಯ ಆಡಳಿತ ಸದಸ್ಯರಾದ ಹರೀಂದ್ರ ಸುವರ್ಣ, ಹೇಮರಾಜ್ ಸಾಲ್ಯಾನ್, ಬಾಲಚಂದ್ರ ಸನಿಲ್, ಯೋಗೀಶ್ ಕೋಟ್ಯಾನ್ ಅತಿಥಿಗಳಾಗಿದ್ದರು.

ಉಪನ್ಯಾಸಕ ರಮೇಶ್ ವಂದಿಸಿದರು. ಕಾಲೇಜು ಪ್ರಾಂಶುಪಾಲ ಯತೀಶ್ ಅಮೀನ್, ಪ್ರಾಥಮಿಕ ವಿಭಾಗದ ಪ್ರೊ। ಕೇಶವ ಗುರುಗಳ ಬಗ್ಗೆ ರಸ ಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು.

**28.08.2022 ಅಧ್ಯಯನ ಪೀಠ ಹಾಗೂ ಪಿಪಿ ಗೋಮತಿ ಸ್ಮಾರಕ ಟ್ರಸ್ಟ್ ಸಹಯೋಗದಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರಿನಲ್ಲಿ ನಡೆಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮ**

**ವಿದ್ವಾನ್ ಟಿ. ಎಂ. ಕೃಷ್ಣ ಇವರಿಂದ ಕಾವ್ಯ ಗಾಯನ**

**ಪ್ರೊ. ಇ.ವಿ. ರಾಮಕೃಷ್ಣನ್ ಅವರಿಂದ ವಿಶೇಷ ಉಪನ್ಯಾಸ: ಶ್ರೀ ನಾರಾಯಣಗುರು ಸಂತ, ಸುಧಾರಕ, ಕವಿ**

**ಸಭಾ ಗಣ್ಯರು**

# ನಾರಾಯಣಗುರು ಕಲ್ಪನೆಯ ಮನುಷ್ಯನನ್ನು ಕಾಣಲು ಇನ್ನೂ ಸಾಧ್ಯವಾಗಿಲ್ಲ: ಪ್ರೊ.ರಾಮಕೃಷ್ಣನ್

## 'ನಾರಾಯಣ ಗುರು: ಸಂತ, ಸುಧಾರಕ, ಕವಿ'–ಉಪನ್ಯಾಸ



ಮಂಗಳೂರು, ಆ.28: ಜಾತಿ ಆಧಾರದಲ್ಲಿ ಮನುಷ್ಯನನ್ನು ನಿಕೃಷ್ಟವಾಗಿ ಕಾಣಲಾಗುತ್ತಿದ್ದ ಕೇರಳದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು ಮಾಡಿದ ಕ್ರಾಂತಿಯ ಬಳಿಕ ಸಾಕಷ್ಟು ಬದಲಾವಣೆಗಳಾದವು. ಆದರೆ ನಾರಾಯಣ ಗುರುವಿನ ಕಲ್ಪನೆಯಲ್ಲಿದ್ದ ಮನುಷ್ಯನನ್ನು ಕಾಣಲು ಇನ್ನೂ ಸಾಧ್ಯವಾಗಿಲ್ಲ ಎಂದು ಗುಜರಾತ್‌ನ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ, ಕೇರಳದ ಪಯ್ಯನ್ನೂರಿನ ಪ್ರೊ. ಇ.ವಿ. ರಾಮಕೃಷ್ಣನ್ ಖೇದ ವ್ಯಕ್ತಪಡಿಸಿದ್ದಾರೆ.

ನಗರದ ಪಿ.ಪಿ. ಗೋಮತಿ ಸ್ಮಾರಕ ಶಿಕ್ಷಣ ಟ್ರಸ್ಟ್ ಮತ್ತು ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ವತಿಯಿಂದ ಹಂಪನಕಟ್ಟೆಯಲ್ಲಿರುವ ಮಂಗಳೂರು ವಿವಿ ಘಟಕ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ರವಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ನಾರಾಯಣ ಗುರು: ಸಂತ, ಸುಧಾರಕ, ಕವಿ' ಎಂಬ ವಿಷಯದಲ್ಲಿ ಅವರು ಉಪನ್ಯಾಸ ನೀಡಿದರು.

16ನೇ ಶತಮಾನದಲ್ಲಿ ಆಚರಣೆಯಲ್ಲಿದ್ದ ಜೀತಪದ್ಧತಿಯು ಮೂರು ಶತಮಾನಗಳವರೆಗೂ ಮುಂದುವರಿದಿತ್ತು. ಬಟ್ಟೆ, ಆಭರಣಗಳನ್ನು ಧರಿಸುವುದಕ್ಕೂ ಅವಕಾಶವಿಲ್ಲದವರ ಮಧ್ಯೆ, ಯಾವ ಜಾತಿಯ ಹೆಸರನ್ನೂ ಹೇಳದೆ ಆಂದೋಲನ ಮಾಡಿದ ನಾರಾಯಣಗುರು ನವ ಕೇರಳ ಮತ್ತು ನವ ಸಮಾಜದ ಕನಸು ಕಂಡಿದ್ದರು. ಆದರೆ ಕೇರಳದಲ್ಲಿ ಈಗಲೂ ಸುಮಾರು 220ರಷ್ಟು ಜಾತಿಗಳಿವೆ. ನಾಯರ್ ಸಮುದಾಯದಲ್ಲೇ 41 ಉಪಜಾತಿಗಳನ್ನು ಕಾಣಬಹುದಾಗಿದೆ. ಇತರ ಜಾತಿಗಳಲ್ಲಿ 170ಕ್ಕೂ ಅಧಿಕ ಉಪಜಾತಿಗಳಿವೆ ಎಂದು ರಾಮಕೃಷ್ಣನ್ ವಿಷಾದಿಸಿದರು.

ಲೇಖಕ, ವೈದ್ಯ ಡಾ.ಶ್ರೀನಿವಾಸ ಕಕ್ಕಿಲ್ಲಾಯ ಪ್ರಾಸ್ತಾವಿಕ ಮಾತುಗಳನ್ನಾಡಿದರು. ನಾರಾಯಣ ಗುರು ವಿರಚಿತ ಕಾವ್ಯವನ್ನು ವಿದ್ವಾನ್ ಟಿ.ಎಂ. ಕೃಷ್ಣ ಹಾಡಿದರು.

Mangalore Edition
Aug 29, 2022 Page No. 12
Powered by : eReleGo.com

## 2021ನೇ ಸಾಲಿನ ನಾರಾಯಣಗುರು ಪ್ರಶಸ್ತಿ ಪ್ರದಾನ ಸಮಾರಂಭ
## ಗುರು ಜಯಂತಿ–2022




**ಡಾ. ಅರುಣ್ ಉಳ್ಳಾಲ್ ಇವರಿಗೆ ಪ್ರಶಸ್ತಿ ಪ್ರದಾನ**




ಗುರುತತ್ವ ದರ್ಶನ ಕೃತಿ ಬಿಡುಗಡೆ




ಪ್ರೊ. ಬಿ.ಎ. ವಿವೇಕ ರೈ ಇವರಿಂದ ಪ್ರದಾನ ಭಾಷಣ




ಮಾನ್ಯ ಕುಲಪತಿಯವರಿಂದ ಶುಭನುಡಿ



ಸಮಾರಂಭದ ಸಾಕ್ಷಿ

ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪ್ರದಾನ । ಗುರುತತ್ವ ದರ್ಶನ ಕೃತಿ ಬಿಡುಗಡೆ

# ಗುರುಗಳಿಂದ ಏಕದೇವತಾ ತತ್ವಪ್ರತಿಪಾದನೆ



ಡಾ. ಅರುಣ್ ಉಳ್ಳಾಲ್ ಅವರಿಗೆ ನಾರಾಯಣಗುರು ಸಂಶೋಧನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ವಿಕ ಸುದ್ದಿಲೋಕ** ಮಂಗಳಗಂಗೋತ್ರಿ

ನಾರಾಯಣ ಗುರುಗಳು ಭಾರತ ಕಂಡ ಮಹಾನ್ ಆಧ್ಯಾತ್ಮ ಸಾಧಕರು. ಅವರ ಹೃದಯದಲ್ಲಿ ಕವಿ, ಚಿಂತಕ, ಸಮಾಜ ಸೇವಕ, ಹೋರಾಟಗಾರ, ನಾಯಕ ಇದ್ದ ಕಾರಣ ಅವರಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಯಿತು. ಅವರು ಅದ್ವೈತ ಸಿದ್ಧಾಂತದ ಬೋಧಕ, ಏಕದೇವತಾ ತತ್ವದ ಪ್ರತಿಪಾದಕ ಎಂದು ಹಿರಿಯ ವಿದ್ವಾಂಸ, ಹಂಪಿ ಹಾಗೂ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಎ. ವಿವೇಕ ರೈ ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2021ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತ ಡಾ. ಅರುಣ್ ಉಳ್ಳಾಲ್ ಅವರಿಗೆ ನಾರಾಯಣಗುರು ಸಂಶೋಧನಾ ಪ್ರಶಸ್ತಿ ನೀಡಿ ಗೌರವಿಸಿ, ಪ್ರಸಾರಾಂಗದ ಪ್ರಕಟಣೆಯ ಪ್ರಶಸ್ತಿ ವಿಜೇತ ಕೃತಿ 'ಗುರುತತ್ವ ದರ್ಶನ' ಕೃತಿಯನ್ನು ಅವರು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಸುಬ್ರಹ್ಮಣ್ಯ ಯಡಪಡಿತ್ತಾಯ, ಅಧ್ಯಯನ ಪೀಠಗಳು ಯುವ ಜನಾಂಗವನ್ನು ಬೌದ್ಧಿಕ ವಿಕಸನಕ್ಕೆ ತೆರೆದುಕೊಳ್ಳುವ ಸಮಾಜಮುಖಿ ಕಾರ್ಯವನ್ನು ಕ್ರಿಯಾಶೀಲವಾಗಿ ಮಾಡಿದಾಗ ಮಾತ್ರ ವಿಶ್ವವಿದ್ಯಾಲಯಕ್ಕೆ ನಿಜ ಅರ್ಥ ಬರುತ್ತದೆ. ನಾರಾಯಣಗುರು ಪೀಠ ಈ ಕೆಲಸವನ್ನು ಅರ್ಥಪೂರ್ಣವಾಗಿ ಮಾಡುತ್ತಿದೆ ಎಂದರು.

ನ್ಯಾಯವಾದಿ, ಹಿರಿಯ ಪತ್ರಕರ್ತ, ವಿಮರ್ಶಕ ಮೋಹನ್‌ಚಂದ್ರನ್ ನಂಬಿಯಾರ್ ನಾರಾಯಣ ಗುರುಗಳ 168ನೇ ಜಯಂತಿಯ ಪ್ರಯುಕ್ತ ವಿಶೇಷ ಉಪನ್ಯಾಸ ನೀಡಿದರು. ಕುಲಸಚಿವ ಡಾ. ಕಿಶೋರ್ ಕುಮಾರ್ ಸಿ.ಕೆ., ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪಿ. ದಯಕರ್, ಪ್ರಸಾರಾಂಗದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಹಾಗೂ ಅಧ್ಯಯನ ಪೀಠದ ಸದಸ್ಯೆ ನಮಿತಾ ಶ್ಯಾಮ್, ಸಂಶೋಧನಾ ಸಹಾಯಕ ಡಾ. ರವಿರಾಜ್ ಬಿ.ವಿ. ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಖ್ಯಾತ ಕಲಾವಿದರಾದ ಪುಷ್ಕಳ ಕುಮಾರ್ ತೋನ್ಸೆ ಮತ್ತು ಡಾ. ದಿನಕರ ಎಸ್. ಪಚ್ಚನಾಡಿ ಅವರಿಂದ ನಾರಾಯಣ ಗುರುಗಳ ಕಾವ್ಯದ ಗಾಯನ ಮತ್ತು ಪ್ರವಚನ ನಡೆಯಿತು. ಉಪನ್ಯಾಸಕಿ ಅನು ಅಭಿನಂದನಾ ಪತ್ರ ವಾಚಿಸಿದರು. ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಪ್ರಾಸ್ತಾವಿಕ ಮಾತನಾಡಿ, ಸ್ವಾಗತಿಸಿದರು. ಡಾ.ಧನಂಜಯ ಕುಂಬ್ಳೆ ವಂದಿಸಿದರು. ಉಪನ್ಯಾಸಕ ಡಾ. ಯಶು ಕುಮಾರ್ ಕಾರ್ಯಕ್ರಮ ನಿರೂಪಿಸಿದರು. VK-17-09-22

ಪ್ರೊ.ವಿವೇಕ್ ರೈ ಅಭಿಪ್ರಾಯ ಡಾ.ಅರುಣ್‌ಗೆ ಸಂಶೋಧನಾ ಪ್ರಶಸ್ತಿ ಪ್ರದಾನ

# ಗುರುಗಳ ಅಂತಃಸತ್ವದಿಂದ ಸಾಮಾಜಿಕ ಕ್ರಾಂತಿ



ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ಶುಕ್ರವಾರ ಡಾ.ಅರುಣ್ ಉಳ್ಳಾಲ್ ಅವರಿಗೆ ಶ್ರೀ ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕುಲಪತಿ ಪ್ರೊ.ಪಿ.ಎಸ್.ಯಡಪಡಿತ್ತಾಯ, ವಿದ್ವಾಂಸ ಪ್ರೊ.ಬಿ.ಎ.ವಿವೇಕ ರೈ, ಪ್ರಮುಖರಾದ ಮೋಹನ್‌ಚಂದ್ರನ್ ನಂಬಿಯಾರ್, ಡಾ.ಕಿಶೋರ್ ಕುಮಾರ್ ಸಿ.ಕೆ., ಡಾ.ಧನಂಜಯ ಕುಂಬ್ಳೆ ಮತ್ತಿತರರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಉಳ್ಳಾಲ

ಭಾರತ ಕಂಡ ಮಹಾನ್ ಅಧ್ಯಾತ್ಮ ಸಾಧಕರಾದ ನಾರಾಯಣ ಗುರುಗಳ ಹೃದಯದಲ್ಲಿ ಕವಿ, ಚಿಂತಕ, ಸಮಾಜಸೇವಕ, ಹೋರಾಟಗಾರ, ನಾಯಕ ಇದ್ದ ಕಾರಣ ಅವರಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಯಿತು ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ವತಿಯಿಂದ ಶುಕ್ರವಾರ 2021ರ ಸಾಲಿನ ಶ್ರೀ ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಸಂಶೋಧಕ, ಯುವ ವಾಗ್ಮಿ ಡಾ.ಅರುಣ್ ಉಳ್ಳಾಲ್ ಅವರಿಗೆ 2021ರ ಸಾಲಿನ ಶ್ರೀ ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಸಾರಾಂಗದ ಪ್ರಕಟಣೆಯ ಪ್ರಶಸ್ತಿ ವಿಜೇತ ಕೃತಿ 'ಗುರುತತ್ವ ದರ್ಶನ' ಬಿಡುಗಡೆಗೊಳಿಸಲಾಯಿತು.

ಮಂಗಳೂರು ವಿವಿ ಕುಲಪತಿ ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ವಕೀಲ ಮೋಹನ್‌ಚಂದ್ರನ್ ನಂಬಿಯಾರ್ ವಿಶೇಷ ಉಪನ್ಯಾಸ ನೀಡಿದರು. ಮಂಗಳೂರು ವಿವಿ ಕುಲಸಚಿವ ಡಾ.ಕಿಶೋರ್ ಕುಮಾರ್ ಸಿ.ಕೆ., ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪಿ.ದಯಾಕರ್, ಪ್ರಸಾರಾಂಗ ನಿರ್ದೇಶಕ ಡಾ.ಧನಂಜಯ ಕುಂಬ್ಳೆ, ಅಧ್ಯಯನ ಪೀಠದ ಸದಸ್ಯೆ ನಮಿತಾ ಶ್ಯಾಮ್, ಸಂಶೋಧನಾ ಸಹಾಯಕ ಡಾ.ರವಿರಾಜ್ ಬಿ.ವಿ. ಉಪಸ್ಥಿತರಿದ್ದರು.

ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕಿ ಅನು ಅಭಿನಂದನಾ ಪತ್ರ ವಾಚಿಸಿದರು. ಉಪನ್ಯಾಸಕ ಡಾ.ಯಶು ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

> ಅಧ್ಯಯನ ಪೀಠಗಳು ಯುವಜನಾಂಗವನ್ನು ಬೌದ್ಧಿಕ ವಿಕಸನಕ್ಕೆ ತೆರೆದುಕೊಳ್ಳುವ ಜತೆಗೆ ಸಮಾಜಮುಖಿ ಕಾರ್ಯ ಕ್ರಿಯಾಶೀಲವಾಗಿ ಮಾಡಿದಾಗ ವಿಶ್ವವಿದ್ಯಾಲಯಕ್ಕೆ ನಿಜಾರ್ಥ ಬರುತ್ತದೆ. ನಾರಾಯಣಗುರು ಪೀಠ ಈ ಕೆಲಸವನ್ನು ಅರ್ಥಪೂರ್ಣವಾಗಿ ಮಾಡುತ್ತಿದೆ.
> | ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ
> ಮಂಗಳೂರು ವಿವಿ ಕುಲಪತಿ

17-09-2022

UDAYAVANI - 17-09-2022

ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2021ರ ಪ್ರಶಸ್ತಿ ಪ್ರದಾನ ಸಮಾರಂಭ

# 'ನಾರಾಯಣ ಗುರುಗಳಿಂದ ಏಕದೇವತಾ ತತ್ವ'



ಡಾ। ಅರುಣ್ ಉಳ್ಳಾಲ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಮಂಗಳಗಂಗೋತ್ರಿ, ಸೆ. 16:** ನಾರಾಯಣ ಗುರುಗಳು ಭಾರತ ಕಂಡ ಮಹಾನ್ ಆಧ್ಯಾತ್ಮ ಸಾಧಕರು. ಅವರ ಹೃದಯದಲ್ಲಿ ಕವಿ, ಚಿಂತಕ, ಸಮಾಜ ಸೇವಕ, ಹೋರಾಟಗಾರ, ನಾಯಕ ಇದ್ದ ಕಾರಣ ಅವರಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಯಿತು. ಅವರು ಅದ್ವೈತ ಸಿದ್ಧಾಂತದ ಬೋಧಕ, ಏಕದೇವತಾ ತತ್ವದ ಪ್ರತಿಪಾದಕ ಎಂದು ಹಿರಿಯ ವಿದ್ವಾಂಸ, ವಿಶ್ರಾಂತ ಕುಲಪತಿ ಪ್ರೊ। ಬಿ.ಎ.ವಿವೇಕ ರೈ ಅಭಿಪ್ರಾಯಪಟ್ಟರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2021ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತ ಡಾ। ಅರುಣ್ ಉಳ್ಳಾಲ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಸಾರಾಂಗದ ಪ್ರಕಟಣೆಯ ಪ್ರಶಸ್ತಿ ವಿಜೇತ ಕೃತಿ 'ಗುರುತತ್ವ ದರ್ಶನ' ಕೃತಿಯನ್ನು ಬಿಡುಗಡೆಗೊಳಿಸಿದರು.

ಮಂಗಳೂರು ವಿ.ವಿ. ಕುಲಪತಿ ಪ್ರೊ। ಸುಬ್ರಹ್ಮಣ್ಯ ಯಡಪಡಿತ್ತಾಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅಧ್ಯಯನ ಪೀಠಗಳು ಯುವ ಜನಾಂಗವನ್ನು ಬೌದ್ಧಿಕ ವಿಕಸನಕ್ಕೆ ತೆರೆದುಕೊಳ್ಳುವ ಸಮಾಜಮುಖಿ ಕಾರ್ಯವನ್ನು ಕ್ರಿಯಾಶೀಲವಾಗಿ ಮಾಡಿದಾಗ ಮಾತ್ರ ವಿಶ್ವವಿದ್ಯಾನಿಲಯಕ್ಕೆ ನಿಜ ಅರ್ಥ ಬರುತ್ತದೆ. ನಾರಾಯಣಗುರು ಪೀಠ ಈ ಕೆಲಸವನ್ನು ಅರ್ಥಪೂರ್ಣವಾಗಿ ಮಾಡುತ್ತಿದೆ ಎಂದರು.

ನಾರಾಯಣ ಗುರುಗಳ 168ನೇ ಜಯಂತಿಯ ಪ್ರಯುಕ್ತ ವಿಶೇಷ ಉಪನ್ಯಾಸ ನೀಡಿದ ನ್ಯಾಯವಾದಿ, ಹಿರಿಯ ಪತ್ರಕರ್ತ, ವಿಮರ್ಶಕ ಮೋಹನ್‌ಚಂದ್ರನ್ ನಂಬಿಯಾರ್ ಅವರು, ನಾರಾಯಣ ಗುರುಗಳ ಜೀವನಾನುಭವವೇ ಒಂದು ಶಕ್ತಿಯಾಗಿದೆ. ದೇವಸ್ಥಾನಗಳು ಶಿಕ್ಷಣ ಕೇಂದ್ರಗಳಾಗಬೇಕು ಎಂದು ಅವರು ನೀಡಿದ ಸಂದೇಶ ಅದು ವಿಶ್ವಸಂದೇಶ ಎಂದರು.

ಕಾರ್ಯಕ್ರಮದಲ್ಲಿ ಕುಲಸಚಿವ ಡಾ। ಕಿಶೋರ್ ಕುಮಾರ್ ಸಿ.ಕೆ., ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪಿ. ದಯಾಕರ್, ಪ್ರಸಾರಾಂಗದ ನಿರ್ದೇಶಕ ಡಾ। ಧನಂಜಯ ಕುಂಬಳೆ, ಅಧ್ಯಯನ ಪೀಠದ ಸದಸ್ಯರಾದ ನಮಿತಾ ಶ್ಯಾಮ್, ಸಂಶೋಧನ ಸಹಾಯಕ ಡಾ। ರವಿರಾಜ್ ಬಿ.ವಿ. ಉಪಸ್ಥಿತರಿದ್ದರು.

ಖ್ಯಾತ ಕಲಾವಿದರಾದ ತೋನ್ಸೆ ಪುಷ್ಕಳ ಕುಮಾರ್ ಮತ್ತು ಡಾ। ದಿನಕರ ಎಸ್. ಪಚ್ಚನಾಡಿ ಅವರಿಂದ ನಾರಾಯಣ ಗುರುಗಳ ಕಾವ್ಯದ ಗಾಯನ ಮತ್ತು ಪ್ರವಚನ ನಡೆಯಿತು. ಉಪನ್ಯಾಸಕಿ ಅನು ಅಭಿನಂದನಾ ಪತ್ರ ವಾಚಿಸಿದರು. ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಡಾ। ಧನಂಜಯ ಕುಂಬಳೆ ವಂದಿಸಿದರು. ಉಪನ್ಯಾಸಕ ಡಾ। ಯಶು ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

# 2022ರ ನಾರಾಯಣಗುರು ಸಂಶೋಧನಾ ಪ್ರಶಸ್ತಿಗೆ ಆಹ್ವಾನ

ಸುದ್ದಿ ಕಾರ್ನರ್

## ನಾರಾಯಣಗುರು ಸಂಶೋಧನಾ ಪ್ರಶಸ್ತಿಗೆ ಆಹ್ವಾನ

**ಮಂಗಳೂರು:** ಮಂಗಳೂರು ವಿವಿಯ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ 2022ನೇ ಸಾಲಿನ ನಾರಾಯಣ ಗುರು ಸಂಶೋಧನಾ ಪ್ರಶಸ್ತಿಗಾಗಿ 'ಭಾರತದ ಸಂತ ಸತ್ವಗಳು ಮತ್ತು ನಾರಾಯಣ ಗುರುಗಳ ತತ್ವಗಳು' ಎಂಬ ವಿಷಯದ ಬಗ್ಗೆ ಸಂಶೋಧನಾತ್ಮಕ ಬರಹಗಳನ್ನು ಆಹ್ವಾನಿಸಿದೆ. ಬರಹವು ನಾರಾಯಣಗುರು ಹಾಗೂ ಭಾರತದ ಸಂತರ ಅನುಭಾವಿಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವ ಚಿಂತನೆಗಳನ್ನು ಒಳಗೊಂಡಿರಬೇಕು. ಗರಿಷ್ಠ 60 ಸಾವಿರ ಪದಗಳಿಗೆ ಮೀರದಂತೆ ಮುದ್ರಣದಲ್ಲಿ ಡೆಮಿ 1/8 ಆಕಾರದ ಕೃತಿಯಲ್ಲಿ 200 ಪುಟಗಳಿಗೆ ಹೊಂದುವಂತೆ ಇರಬೇಕು. ಪ್ರಶಸ್ತಿಯು 10 ಸಾವಿರ ರೂ. ನಗದು ಹೊಂದಿದೆ. ಆಸಕ್ತರು ಫೆ.25ರೊಳಗೆ ಹೆಸರು ನೋಂದಾಯಿಸಬೇಕು. ಕಾಲೇಜು, ವಿವಿ ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಸಾರ್ವಜನಿಕರಿಗೂ ಅವಕಾಶವಿದೆ. ಬರಹದ ಕರಡು ಪ್ರತಿಯನ್ನು ಡಿ.30ರ ಒಳಗಾಗಿ ನಿರ್ದೇಶಕರು, ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿವಿ ಮಂಗಳಗಂಗೋತ್ರಿ-574199 ಇಲ್ಲಿಗೆ ತಲುಪಿಸಬೇಕು. ವಿವರಗಳಿಗೆ ದೂರವಾಣಿ-9845665807 ಸಂಪರ್ಕಿಸಬಹುದು ಎಂದು ಪೀಠದ ಸಂಚಾಲಕ ಡಾ.ಗಣೇಶ್ ಅಮೀನ್ ಸಂಕಮಾರ್ ತಿಳಿಸಿದ್ದಾರೆ.

ವಿಜಯವಾಣಿ: 13.01.2022

## ಸಂಶೋಧನ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

**ಮಹಾನಗರ, ಜ. 12:** ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವು 2022ರ ನಾರಾಯಣ ಗುರು ಸಂಶೋಧನ ಪ್ರಶಸ್ತಿಗೆ ಹಸ್ತಪ್ರತಿಗಳನ್ನು ಆಹ್ವಾನಿಸುತ್ತಿದೆ.

ನಾರಾಯಣ ಗುರುಗಳ ಸಮಾಜ ಮುಖಿ ಚಿಂತನೆಗಳು ಯುವ ಜನಾಂಗದಲ್ಲಿ ಶಿಕ್ಷಣ, ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಜಾಗೃತಿಯನ್ನು ಮೂಡಿಸುವ ಸಲುವಾಗಿ ಅಧ್ಯಯನಶೀಲ ಸಂಶೋಧಕರ ಸಂಶೋಧನ ಬರಹಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ 'ಭಾರತದ ಸಂತಸತ್ವಗಳು ಮತ್ತು ನಾರಾಯಣ ಗುರುಗಳ ತತ್ವಗಳು' ಎಂಬ ವಿಷಯದ ಬಗ್ಗೆ ಸಂಶೋಧನಾತ್ಮಕ ಬರಹಗಳನ್ನು ಆಹ್ವಾನಿಸುತ್ತಿದೆ. ಈ ಅಧ್ಯಯನವು ವಿಶ್ವ ವಿದ್ಯಾ ನಿಲಯದ ಶೈಕ್ಷಣಿಕ ಆಯಾಮದ ನಿಯಮಕ್ಕೆ ಅನುಗುಣವಾಗಿರುತ್ತದೆ. ಸಂಶೋಧನ ಬರವಣಿಗೆಯು ನಾರಾಯಣಗುರು ಹಾಗೂ ಭಾರತದ ಸಂತರ ಅನುಭಾವಿಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವಚಿಂತನೆಗಳನ್ನು ಒಳಗೊಂಡಿರಬೇಕು. ಗರಿಷ್ಠ 60,000 ಪದಗಳಿಗೆ ಮೀರದಂತೆ ಮುದ್ರಣದಲ್ಲಿ ಡೆಮಿ 1/8 ಆಕಾರದ ಕೃತಿಯಲ್ಲಿ 200 ಪುಟಗಳಿಗೆ ಹೊಂದುವಂತೆ ಇರಬೇಕು.

ಈ ಪ್ರಶಸ್ತಿಯು 10,000 ರೂ. ಮೊತ್ತದ ನಗದನ್ನು ಹೊಂದಿರುತ್ತದೆ. ಆಸಕ್ತ ಸಂಶೋಧಕರು 2022 ಫೆ. 25ರ ಒಳಗೆ ತಮ್ಮ ಹೆಸರನ್ನು ಅಧ್ಯಯನ ಪೀಠದಲ್ಲಿ ನೋಂದಾಯಿಸಬೇಕು. ಶಾಲಾ ಕಾಲೇಜು, ವಿಶ್ವವಿದ್ಯಾನಿ ಲಯಗಳ ವಿದ್ಯಾರ್ಥಿಗಳು, ಉಪನ್ಯಾಸಕ ರನ್ನೊಳಗೊಂಡಂತೆ ಸಾರ್ವಜನಿಕರಿಗೂ ಈ ಸಂಶೋಧನ ಕೃತಿ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶವಿದೆ. ಕೃತಿಯ ಮೌಲ್ಯಮಾಪನ, ಪ್ರಶಸ್ತಿಯ ಆಯ್ಕೆಯು ವಿಶ್ವ ವಿದ್ಯಾ ನಿಲಯ ನಿಯೋಜಿತ ಆಯ್ಕೆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಕೃತಿಯ ಸಂಶೋಧನ ಬರಹದ ಕರಡು (ಹಾರ್ಡ್ ಕಾಪಿ)ಪ್ರತಿಯನ್ನು 2022 ಡಿ. 30ರ ಒಳಗಾಗಿ ನಿರ್ದೇಶಕರು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿಶ್ವ ವಿದ್ಯಾನಿಲಯ, ಮಂಗಳಗಂಗೋತ್ರಿ-574199 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸಬೇಕು. ನಿಗದಿತ ದಿನಾಂಕದ ಅನಂತರ ಬಂದ ಬರಹಗಳನ್ನು ಪರಿಗಣಿಸಲಾಗುವುದಿಲ್ಲ. ಮಾಹಿತಿಗಾಗಿ ಅಧ್ಯಯನ ಪೀಠವನ್ನು ಸಂಪರ್ಕಿಸಬಹುದು ಎಂದು ಡಾ। ಗಣೇಶ್ ಅಮೀನ್ ಸಂಕಮಾರ್ ತಿಳಿಸಿದ್ದಾರೆ.

ಉದಯವಾಣಿ - 13.01.2022

## ಸಂಶೋಧನಾ ಪ್ರಶಸ್ತಿ

**ಮಂಗಳೂರು:** ಮಂಗಳೂರು ವಿಶ್ವ ವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠವು 2022ರ ನಾರಾಯಣ ಗುರು ಸಂಶೋಧನಾ ಪ್ರಶಸ್ತಿಗೆ 'ಭಾರತದ ಸಂತಸತ್ವಗಳು ಮತ್ತು ನಾರಾಯಣ ಗುರುಗಳ ತತ್ವಗಳು' ಎಂಬ ವಿಷಯದ ಬಗ್ಗೆಸಂಶೋಧನಾತ್ಮಕ ಬರಹಗಳನ್ನು ಆಹ್ವಾನಿಸುತ್ತಿದೆ. ಈ ಪ್ರಶಸ್ತಿಯು 10 ಸಾವಿರ ರೂ. ನಗದು ಹೊಂದಿದೆ.

ಸಂಶೋಧನಾ ಬರವಣಿಗೆಯು ನಾರಾಯಣಗುರು ಹಾಗೂ ಭಾರತದ ಸಂತರ ಅನುಭಾವಿಗಳ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ತತ್ವಚಿಂತನೆಗಳನ್ನು ಒಳಗೊಂಡಿರಬೇಕು ಆಸಕ್ತ ಸಂಶೋಧಕರು ಫೆ.25ರೊಳಗೆ ಹೆಸರು ನೋಂದಾಯಿಸಬೇಕು. ಶಾಲಾ ಕಾಲೇಜು, ವಿವಿ ವಿದ್ಯಾರ್ಥಿಗಳು, ಉಪನ್ಯಾಸಕರ ಸಹಿತ ಸಾರ್ವಜನಿಕರಿಗೂ ಈ ಸಂಶೋಧನಾ ಕೃತಿ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶವಿದೆ. ಕೃತಿಯ ಸಂಶೋಧನಾ ಬರಹದ ಕರಡು ಪ್ರತಿಯನ್ನು ಡಿಸೆಂಬರ್ 30ರೊಳಗೆ ನಿರ್ದೇಶಕರು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿವಿ, ಮಂಗಳಗಂಗೋತ್ರಿ-574199 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಪ್ರಶಸ್ತಿ ಸಮಿತಿ ಮತ್ತು ಮೌಲ್ಯಮಾಪಕರ ತೀರ್ಮಾನವೇ ಅಂತಿಮ ಎಂದು ಪೀಠದ ಸಂಯೋಜಕ ಡಾ. ಗಣೇಶ್ ಅಮೀನ್ ಸಂಕಮಾರ್ ತಿಳಿಸಿದ್ದಾರೆ.

ವಿಜಯ ಕರ್ನಾಟಕ 11/1/22




ಪೋಲೀಸ್ ಆಯುಕ್ತ ಮಹೇಶ್ ಕುಮಾರ್ ಅವರಿಂದ ಭಾರತದ ಸಂತ ಸತ್ವಗಳು ಉಪನ್ಯಾಸ–5ರ ಉದ್ಘಾಟನೆ

ಡಾ.ವಾಸುದೇವ ಬೆಳ್ಳೆ ಅವರಿಂದ ವಿಶೇಷ ಉಪನ್ಯಾಸ

ಅತಿಥಿ ಭಾಷಣದಲ್ಲಿ ಯುಗಪುರುಷದ ಸಂಪಾದಕ – ಶ್ರೀ ಭುವನಾಭಿರಾಮ ಉಡುಪ

ಪೀಠದ ನಿರ್ದೇಶಕರಿಂದ ಪ್ರಾಸ್ತಾವಿಕ ನುಡಿ

ಪಡಿ ಮಂಚಕ್ಕೆ ಭತ್ತದ ತೆನೆಯನ್ನು ಬಡಿಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಪಣಂಬೂರು ಎಸಿಪಿ ಮಹೇಶ್ ಕುಮಾರ್ ಮತ್ತು ಅತಿಥಿಗಳಿಂದ

ಎಸಿಪಿ ಮಹೇಶ್ ಕುಮಾರ್ ರಿಂದ ಉದ್ಘಾಟನಾ ಭಾಷಣ

ಯುವ ಜನರಿಗೆ ಉಳುಮೆಯ ಕುರಿತು ಕಾರ್ಯಾಗಾರ ಗದ್ದೆಯಲ್ಲಿ ಕೋಣಗಳನ್ನು ಕಟ್ಟಿ ಉಳುಮೆಯ ಪ್ರಾತ್ಯಕ್ಷಿಕೆ

## 'ನೇಗಿಲ ಯೋಗಿ ಯುವಕರಿಗೆ ಕೃಷಿ ಖುಷಿ' ಕಾರ್ಯಕ್ರಮ

# ಕೃಷಿ ಪರಂಪರೆ ಉಳಿಸಿ, ಬೆಳೆಸುವ

**ಹಳೆಯಂಗಡಿ:** ಮಂಗಳೂರು ವಿಶ್ವ ವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಸಂಯೋಜನೆಯಲ್ಲಿ ಸುರತ್ಕಲ್ ರಾಷ್ಟ್ರೀಯ ಸೇವಾ ಯೋಜನಾ ಘಟಕ, ಗೋವಿಂದ ದಾಸ ಕಾಲೇಜು, ಜೂನಿಯರ್ ರೆಡ್‌ಕ್ರಾಸ್ ಘಟಕ, ರೋವರ್ಸ್ ಅಂಡ್ ರೇಂಜರ್ಸ್ ಘಟಕ, ಗೋವಿಂದ ದಾಸ್ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ 'ನೇಗಿಲ ಯೋಗಿ ಯುವಕರಿಗೆ ಕೃಷಿ ಖುಷಿ' ಕಾರ್ಯಕ್ರಮ ಪಾವಂಜೆ ನೀಸಾದ ರಂಗಮಂದಿರದಲ್ಲಿ ನಡೆಯಿತು.

**ಅಳಿವಿನಂಚಿನಲ್ಲಿ ಕೃಷಿ:** ಮಂಗಳೂರು ಉತ್ತರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಮಹೇಶ್ ಕುಮಾರ್ ಉದ್ಘಾಟಿಸಿ, ಆಧುನಿಕ ಯುಗದಲ್ಲಿ ಕೃಷಿಭೂಮಿ ಕಡಿಮೆಯಾಗುತ್ತಿದ್ದು, ಮಕ್ಕಳಲ್ಲಿ ಮಣ್ಣಿನ ನಂಟು ಬೆಳೆಸುವ ಮೂಲಕ ಕೃಷಿ ಪರಂಪರೆ ಉಳಿಸಿ, ಬೆಳೆಸುವ ಕಾರ್ಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ [illegible] ಮಹಾಬಲ ಪೂಜಾರಿ, ಭುವನಾಭಿರಾಮ ಉಡುಪ, ಪ್ರಾಂಶುಪಾಲ ಪ್ರೊ. ಕೃಷ್ಣಮೂರ್ತಿ, ಪಿ. ದಯಾಕರ್ , ಯಾದವ ದೇವಾಡಿಗ, ಹಳೆಯಂಗಡಿ ಪ್ರೊ. ಧರ್ಮಪಾಲ, ಉದ್ಯಮಿ [illegible], [illegible], ಕುಲಸಚಿವ ಡಾ. ಕಿಶೋರ್ ಕುಮಾರ್ ಸಿ.ಕೆ., ಸಂಯೋಜಕ ಡಾ. [illegible] ಸಂಕಮಾರ್, ವಿವಿಧ ಸೇವಾ ಯೋಜನೆಗಳ ಸಂಯೋಜಕರಾದ [illegible] ಜಯಂತಿ ಮೊದಲಾದವರು ಉಪಸ್ಥಿತರಿದ್ದರು.



ಮಹೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು

- ಪಾವಂಜೆ ನೀಸಾದ ರಂಗಮಂದಿರದಲ್ಲಿ ನಡೆದ ಕಾರ್ಯಕ್ರಮ
- ವಿವಿಧ ಗಣ್ಯರ ಉಪಸ್ಥಿತಿ

ಈ ಸಂದರ್ಭ [illegible] ಹಾಗೂ ಗುರು [illegible] ಬಗ್ಗೆ ಮೂಲ್ಕಿ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ. ವಾಸುದೇವ ಬೆಳ್ಳೆ ಉಪನ್ಯಾಸ ನೀಡಿದರು. ಅನು ಸಂಕಮಾರ್ ಕಾರ್ಯಕ್ರಮ ನಿರೂಪಿಸಿದರು.

## ಕೃಷಿ ಖುಷಿ ಕಾರ್ಯಕ್ರಮ ಉದ್ಘಾಟಿಸಿ ಎಸಿಪಿ ಮಹೇಶ್ ಕುಮಾರ್ ಆಶಯ

# ಮಕ್ಕಳಿಗೆ ಕೃಷಿ ಬದುಕಿನ ಪರಂಪರೆ ಪರಿಚಯಿಸುವುದು ಅಗತ್ಯ

ಹಳೆಯಂಗಡಿ: ಮಾತೃ ಸಮಾನವಾದ ಮಣ್ಣಿನ ಸತ್ವದ ಕೃಷಿ ಬದುಕಿನ ಪರಂಪರೆಯನ್ನು ಮಕ್ಕಳಿಗೆ ತಿಳಿಸುವ ಕಾರ್ಯ ನಡೆಯದಿದ್ದರೆ ಕಾಣದ ಕಡಲಿನ ಬಗ್ಗೆ ಬೆನ್ನು ಹತ್ತಿ ತನ್ನತನ ಸಂಸ್ಕೃತಿ ಸಂಸ್ಕಾರ ಮರೆತು ಸಮಾಜಘಾತಕರಾಗಿ ಬದುಕುವ ಭೀತಿ ಇದೆ ಎಂದು ಮಂಗಳೂರು ಉತ್ತರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಮಹೇಶ್ ಕುಮಾರ್ ಹೇಳಿದರು.

ಪಾವಂಜೆ ನೀನಾದ ರಂಗಮಂದಿರದಲ್ಲಿ ಶುಕ್ರವಾರ ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ ಸಂಯೋಜನೆಯಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜು ರಾಷ್ಟ್ರೀಯ ಸೇವಾ ಯೋಜನಾ ಘಟಕ, ಜೂನಿಯರ್ ರೆಡ್‌ಕ್ರಾಸ್ ಘಟಕ, ರೋವರ್ಸ್ ಆ್ಯಂಡ್ ರೇಂಜರ್ಸ್ ಘಟಕ, ಗೋವಿಂದ ದಾಸ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ನೇಗಿಲ ಯೋಗಿ ಯುವಕರಿಗೆ ಕೃಷಿ ಖುಷಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮೂಲ್ಕಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ ಕನಕ ತತ್ವ ಹಾಗೂ ಗುರು ಸತ್ವದ ಬಗ್ಗೆ ಉಪನ್ಯಾಸ ನೀಡಿದರು.

ಸಾಮಾಜಿಕ ಹಾಗೂ ಧಾರ್ಮಿಕ ಮುಂದಾಳು ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಸುರತ್ಕಲ್ ಗೋವಿಂದದಾಸ್ ಕಾಲೇಜು ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ, ಕಾಟಿಪಳ್ಳ ಶ್ರೀ ನಾರಾಯಣಗುರು ಸಂಸ್ಥೆಗಳ ಅಧ್ಯಕ್ಷ ಪಿ.ದಯಾಕರ್, ಸದಸ್ಯ ಭೋಜ ಅಂಚನ್ ಮದ್ಯ, ಯೋಗತಜ್ಞಯಾದವ ದೇವಾಡಿಗ ಹಳೆಯಂಗಡಿ, ಶ್ರೀ ನಾರಾಯಣಗುರು ಪ.ಪೂ. ಕಾಲೇಜು ಉಪಪ್ರಾಂಶುಪಾಲ ಪ್ರೊ.ಧರ್ಮಪಾಲ, ಉದ್ಯಮಿ ರಾಜಾರಾಮ ಸಾಲ್ಯಾನ್, ಪ್ರಗತಿಪರ ಕೃಷಿಕ ಬಾಲಚಂದ್ರ ಸನಿಲ್ ಮೂಲ್ಕಿ, ಸಂಯೋಜಕ ಡಾ.ಗಣೇಶ್ ಅಮೀನ್ ಸಂಕಮಾರ್, ಎನ್.ಎಸ್.ಎಸ್ ಸಂಯೋಜಕಿ ಅಕ್ಷತಾ, ರೋವರ್ಸ್ ಮತ್ತು ರೇಂಜರ್ಸ್ ಸಂಯೋಜಕಿ ಶೈಲಜಾ, ರೆಡ್‌ಕ್ರಾಸ್ ಸಂಯೋಜಕಿ ಜಯಂತಿ ಉಪಸ್ಥಿತರಿದ್ದರು. ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ, ಅನು ಸಂಕಮಾರ್ ನಿರೂಪಿಸಿದರು. ಜಯಂತಿ ಸಂಕಮಾರ್ ವಂದಿಸಿದರು.



ಪಡಿ ಮಂಚದ ಮೇಲೆ ತೆನೆ ಪೈರು ಬಡಿದು ಭತ್ತ ಬೇರ್ಪಡಿಸಿ ಪೊಲಿ ಹಾಕುವ ಮೂಲಕ ಕೃಷಿ ಖುಷಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಹಾಯಕ ಪೊಲೀಸ್ ಆಯುಕ್ತ ಮಹೇಶ್ ಕುಮಾರ್, ಧಾರ್ಮಿಕ ಪರಿಷತ್ ಸದಸ್ಯ ಭುವನಾಭಿರಾಮ ಉಡುಪ, ಕಡಂಬೋಡಿ ಮಹಾಬಲ ಪೂಜಾರಿ ಇದ್ದರು.

> ಸೇವೆ ಹಾಗೂ ತ್ಯಾಗಮಯ ಬದುಕಾದ ಕೃಷಿ ಸಂಸ್ಕೃತಿಯನ್ನು ಮಕ್ಕಳಿಗೆ ಕಲಿಸಿಕೊಟ್ಟಲ್ಲಿ, ಪ್ರಾದೇಶಿಕ ಸಂಸ್ಕೃತಿ ಭಾಷೆಯ ಅಭಿವೃದ್ಧಿ ಸಾಧ್ಯ.
>
> | ಭುವನಾಭಿರಾಮ ಉಡುಪ
> ಧಾರ್ಮಿಕ ಪರಿಷತ್ ಸದಸ್ಯ

### ವಿಶೇಷ ರೀತಿಯಲ್ಲಿ ಉದ್ಘಾಟನೆ

ಕೋಣ ಉಪಯೋಗಿಸಿ ನೇಗಿಲಿನಿಂದ ಉಳುವುದು, ಪವರ್ ಟಿಲ್ಲರ್ ಉಳುಮೆ ಪ್ರಾತ್ಯಕ್ಷಿಕೆ ನಡೆಯಿತು. ವೇದಿಕೆಯಲ್ಲಿ ದೀಪ ಬೆಳಗಿಸಿ, ಪಡಿ ಮಂಚದ ಮೇಲೆ ತೆನೆ ಪೈರು ಹೊಡೆದು ಬತ್ತ ತೆಗೆದು ಪೊಲಿ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶೈಲಜಾ ಕೃಷಿ ಹಾಡುಗಳನ್ನು ಹಾಡಿದರು, ಡಾ.ಗಣೇಶ್ ಅಮೀನ್ ಸಂಕಮಾರ್ ಪೊಲಿ ಕೂಗಿದರು. ನಂದಿನಿ ನದಿ ಮುಖಜ ಗದ್ದೆಯಲ್ಲಿ ಕೃಷಿ ಅಧ್ಯಯನದ ಬಳಿಕ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಯಿತು.

**ಭಾರತದ ಸಂತ ಸತ್ವ ವಿಶೇಷ ಉಪನ್ಯಾಸ-6** **06.12.2022**

ಅಕ್ಷಯ ಸಂತ ನಾರಾಯಣಗುರು ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆ

ಸಮಾರಂಭದ ಅಕ್ಷಯ ಸಾಕ್ಷಿ

**ಮಾಧ್ಯಮ ಮನ್ನಣೆ**

# ಅಕ್ಷಯ ಕಾಲೇಜು: ನಾರಾಯಣಗುರು ವಿಚಾರಧಾರೆ

**ಪುತ್ತೂರು, ಡಿ. 6:** ಸಂಪ್ಯ ಅಕ್ಷಯ ಕಾಲೇಜಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ ಇದರ ಸಂಯೋಜನೆಯಲ್ಲಿ ಹಾಗೂ ಅಕ್ಷಯ ಕಾಲೇಜು ಪುತ್ತೂರು ರಾಷ್ಟ್ರೀಯ ಸೇವಾ ಯೋಜನ ಸಹಯೋಗದಲ್ಲಿ ಅಕ್ಷಯ ಸಂತ ನಾರಾಯಣಗುರು ವಿಚಾರಧಾರೆಕಾರ್ಯಕ್ರಮ ಮಂಗಳವಾರ ನಡೆಯಿತು.



ಅಕ್ಷಯ ಸಂತ ನಾರಾಯಣಗುರು ವಿಚಾರಧಾರೆ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮವನ್ನು ಶ್ರೀ ನಾರಾಯಣಗುರು ಶಿಕ್ಷಣ ಸಂಸ್ಥೆ ಕಾಟಿಪಳ್ಳ ಇದರ ಅಧ್ಯಕ್ಷ ಪಿ. ದಯಾಕರ್ ಉದ್ಘಾಟಿಸಿ ಶುಭ ಹಾರೈಸಿದರು.

ಕಾಟಿಪಳ್ಳ ಶ್ರೀ ನಾರಾಯಣಗುರು ಆಂಗ್ಲಮಾಧ್ಯಮ ಪ್ರೌಢಶಾಲೆ ಇದರ ಮುಖ್ಯಗುರು ಗುಣವತಿ ರಮೇಶ್ ಅಕ್ಷಯ ಸಂತ ಸತ್ವ ನಾರಾಯಣಗುರು ವಿಷಯದ ಕುರಿತು ನಾರಾಯಣಗುರುಗಳ ಸಾಮಾಜಿಕ ಸುಧಾರಣೆ ಹಾಗೂ ಅವರ ಚಿಂತನೆಗಳ ಬಗ್ಗೆ ಉಪನ್ಯಾಸ ನೀಡಿದರು.

ನಾರಾಯಣಗುರು ಅಧ್ಯಯನ ಪೀಠದ ಸಂಯೋಜಕ ಡಾ। ಗಣೇಶ್ ಅಮೀನ್ ಸಂಕಮಾರ್ ನಾರಾಯಣಗುರುಗಳ ತತ್ವದ ಮಹತ್ವವನ್ನು ತಿಳಿಸಿದರು.

ಅಕ್ಷಯ ಕಾಲೇಜಿನ ಅಧ್ಯಕ್ಷ ಜಯಂತ್ ನಡುಬೈಲು ಅಧ್ಯಕ್ಷತೆಯನ್ನು ವಹಿಸಿದ್ದರು.

ನಾರಾಯಣಗುರು ಶಿಕ್ಷಣ ಸಂಸ್ಥೆ ಕಾಟಿಪಳ್ಳ ಇದರ ಸದಸ್ಯ ಭೋಜ ಅಂಚನ್ ಮಧ್ಯ, ಕಾಲೇಜಿನ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ, ಪ್ರಾಂಶುಪಾಲ ಸಂಪತ್ ಪಕ್ಕಳ, ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಗನ್ ದೀಪ್ ಉಪಸ್ಥಿತರಿದ್ದರು. ಗ್ರಂಥಾಪಾಲಕಿ ಪ್ರಭಾವತಿ ಸ್ವಾಗತಿಸಿ, ಉಪನ್ಯಾಸಕಿ ರಶ್ಮಿ ಕೆ ವಂದಿಸಿದರು. ಉಪನ್ಯಾಸಕಿ ಆಶಿಕಾ ಫರ್ಝಾನ ಕೆ.ಎ. ನಿರೂಪಿಸಿದರು.

**ಭಾರತದ ಸಂತಸತ್ವ ರಾಷ್ಟ್ರೀಯ ವಿಚಾರ ಸಂಕಿರಣ** **06.02.2023**


ಮಂಗಳೂರು ವಿಶ್ವವಿದ್ಯಾನಿಲಯ

ರಾಷ್ಟ್ರೀಯ ವಿಚಾರ ಸಂಕಿರಣ

06-02-2023



ಕುಲಸಚಿವರಾದ ಡಾ. ಕಿಶೋರ್ ಕುಮಾರ್ ಸಿ.ಕೆ. ಮತ್ತು ಗಣ್ಯರಿಂದ ಉದ್ಘಾಟನೆ



ಮಾಧ್ಯಮ ಮನ್ನಣೆ

## ಕಾಟಿಪಳ್ಳ ವಿದ್ಯಾಸಂಸ್ಥೆ ವಿಚಾರಸಂಕಿರಣದಲ್ಲಿ ಡಾ.ಕಿಶೋರ್ ಕುಮಾರ್ ಅನಿಸಿಕೆ

# ಬಡವರ ಕಾಳಜಿಯ ಸಂತರಿಂದ ಸಾಮಾಜಿಕ ಬದಲಾವಣೆ

ಸುರತ್ಕಲ್: ಸಂತ ತತ್ವ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಮಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಡಾ.ಕಿಶೋರ್ ಕುಮಾರ್ ಸಿ.ಕೆ. ಹೇಳಿದರು.

ಕಾಟಿಪಳ್ಳದ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳ ಅವರಣದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಸಂಯೋಜನೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಸಮೂಹ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಭಾರತದ ಸಂತ ತತ್ವ ಮತ್ತು ನಾರಾಯಣ ಗುರುಗಳ ತತ್ವ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ನಾರಾಯಣಗುರು ಅವರಂಥ ಕೆಲ ಮಹಾತ್ಮರು ನೋವಿನಿಂದ ಹಸಿವಿನಿಂದ ರೂಪು ಪಡೆದ ಧೀಮಂತ ಸಂತ ಪರಂಪರೆಯವರು. ಅವರ ಬದುಕಿನಲ್ಲಿ ಮುಗ್ಧತೆ, ಮಣ್ಣಿನ ಗುಣ ಇದೆ. ಬಡವರ ಬಗ್ಗೆ ಕಾಳಜಿ ಇದೆ. ಅದ್ದರಿಂದ ಸಾಮಾಜಿಕ ಬದಲಾವಣೆ ಅವರಿಂದ ಸಾಧ್ಯವಾಯಿತು.

ಮಂಗಳೂರು ವಿಶ್ವವಿದ್ಯಾಲಯವು ನಾರಾಯಣ ಗುರು ಅಧ್ಯಯನ ಪೀಠದ ಮೂಲಕ ಜನರ ಸಮಾನತೆಗೆ ಮತ್ತು ಮಾನಸಿಕ ಆರೋಗ್ಯಕ್ಕೆ ಬೇಕಾದ ಸಂತರ ಚಿಂತನೆಗಳನ್ನು ಲೋಕಾರ್ಪಣೆ ಮಾಡಲಾಗುತ್ತಿದೆ ಎಂದರು.



ಕಾಟಿಪಳ್ಳದ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳ ಅವರಣದಲ್ಲಿ ಭಾರತದ ಸಂತ ತತ್ವ ಮತ್ತು ನಾರಾಯಣ ಗುರುಗಳ ತತ್ವ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಲಾಯಿತು. ಡಾ.ಕಿಶೋರ್ ಕುಮಾರ್ ಸಿ.ಕೆ., ಕ್ಯಾ.ಗಣೇಶ್ ಕಾರ್ಣಿಕ್, ಮಧುಕರ ಅಮೀನ್, ಕಡಂಬೋಡಿ ಮಹಾಬಲ ಪೂಜಾರಿ, ರಾಜಾರಾಮ್ ಸಾಲ್ಯಾನ್, ಭೋಜ ಅಂಚನ್ ಮಧ್ಯ ಉಪಸ್ಥಿತರಿದ್ದರು.

**ಸಮಾನತೆಗೆ ಸಂತ ಸತ್ವ ಪೂರಕ:** ದಿಕ್ಸೂಚಿ ಭಾಷಣ ಮಾಡಿದ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಕ್ಯಾ.ಗಣೇಶ್ ಕಾರ್ಣಿಕ್, ಭಾರತೀಯ ಪರಂಪರೆಯ ಎಲ್ಲ ಸಂತರ ಸತ್ವಗಳು ನಾರಾಯಣ ಗುರುಗಳ ಚಿಂತನೆ ಹಾಗೂ ಸಂದೇಶಗಳಲ್ಲಿ ಅಡಗಿದೆ. ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮಹತ್ವದ ಹೊಣೆಗಾರಿಕೆ ನಮ್ಮ ಮೇಲಿದೆ. ರಾಷ್ಟ್ರೀಯ ಸಮಾನತೆಗೆ ಸಂತರ ಸತ್ವ ಪೂರಕವಾಗಿದೆ ಎಂದರು.

ಹಿರಿಯ ಪತ್ರಕರ್ತ ಮೋಹನ್‌ಚಂದ್ರನ್ ನಂಬಿಯಾರ್, ಬ್ಯಾಂಕ್ ಆಫ್ ಬರೋಡಾದ ನಿವೃತ್ತ ಜನರಲ್ ಮ್ಯಾನೇಜರ್ ಡಿ.ಎಮ್ ಕರ್ಕೇರ, ಬ್ರಹ್ಮಶ್ರೀ ನಾರಾಯಣಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಿ. ದಯಾಕರ್ ಅಧ್ಯಕ್ಷತೆ ವಹಿಸಿದ್ದರು. ಸದಸ್ಯ ಮಧುಕರ ಅಮೀನ್, ಕಡಂಬೋಡಿ ಮಹಾಬಲ ಪೂಜಾರಿ, ರಾಜಾರಾಮ್ ಸಾಲ್ಯಾನ್, ಭೋಜ ಅಂಚನ್ ಮಧ್ಯ ಉಪಸ್ಥಿತರಿದ್ದರು.

ಮಂಗಳೂರು ವಿ.ವಿ ಕನ್ನಡ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ ಕನಕ ಸತ್ವ ಗುರು ಸತ್ವದ ಬಗ್ಗೆ, ಕೇರಳ ಕೇಂದ್ರೀಯ ವಿಶ್ವ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಚೇತನ್ ಮುಂಡಾಜೆ ಅವರು ವಿವೇಕಾನಂದ, ನಾರಾಯಣ ಗುರುಗಳ ವಿಷಯದ ಬಗ್ಗೆ, ಮೋಹನ್ ಚಂದ್ರನ್ ನಂಬಿಯಾರ್ ನಾರಾಯಣ ಗುರು ವಿಷಯಗಳ ಬಗ್ಗೆ ಚಿಂತನೆ ಹಂಚಿಕೊಂಡರು.

ಕಾಟಿಪಳ್ಳ ಶಿಕ್ಷಣ ಸಂಸ್ಥೆ ಗಳ ಸಂಸ್ಥಾಪಕ ಪಿ ಸಾದು ಪೂಜಾರಿ ಸ್ಮರಣೆಯ ಮೂಲಕ ಆರಂಭಗೊಂಡ ಸಮಾರಂಭ ಮಲ್ಲಿಕಾ ಮತ್ತು ಬಳಗದವರ ಸತ್ವ ಪದದೊಂದಿಗೆ ಕಾರ್ಯಕ್ರಮ ದುದ್ದಕ್ಕೂ ಮೆರುಗು ನೀಡಿತ್ತು ಮಂಗಳೂರು ವಿ. ವಿ ನಾರಾಯಣ ಗುರು ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ ಅಮೀನ್‌ಸಂಕಮಾರ್ ಪ್ರಸ್ತಾವಿಸಿ, ಸ್ವಾಗತಿಸಿದರು. ಡಾ.ಯಶುಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಉದಯವಾಣಿ : 07.02.2023

**ಭಾರತದ ಸಂತ ಸತ್ವ ವಿಶೇಷ ಉಪನ್ಯಾಸ-8 ಶೂದ್ರ ಶಿವನ ಅನಾವರಣ** **16.03.2023**

ಮಂಗಳೂರು ವಿಶ್ವವಿದ್ಯಾನಿಲಯ
ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ
ಮಂಗಳಗಂಗೋತ್ರಿ – ೫೭೪ ೧೯೯
ಸಂಯೋಜನೆಯಲ್ಲಿ

ಸರಕಾರಿ ಪ್ರೌಢಶಾಲೆ, ಚೇಳ್ಯಾರು
ಇವರ ಸಹಯೋಗದಲ್ಲಿ




ಭಾರತದ ಸಂತ ಸತ್ವ 2023ರ ಸರಣಿ ಉಪನ್ಯಾಸ–8

16–03–2023 ಗುರುವಾರ ಮಧ್ಯಾಹ್ನ 2–00ರಿಂದ
ಸರಕಾರಿ ಪ್ರೌಢಶಾಲೆ, ಚೇಳ್ಯಾರು

**ಸಂತ ಸತ್ವ – ಶೂದ್ರ ಶಿವನ ಅನಾವರಣ**

ಉದ್ಘಾಟನೆ : **ಶ್ರೀಮತಿ ಯಶೋದ**
ಅಧ್ಯಕ್ಷರು, ಗ್ರಾಮ ಪಂಚಾಯತ್, ಚೇಳ್ಯಾರು

ಅಧ್ಯಕ್ಷತೆ : **ಶ್ರೀಮತಿ ತೆರೆಸಾ ವೇಗಸ್**
ಮುಖ್ಯೋಪಾಧ್ಯಾಯರು, ಸರಕಾರಿ ಪ್ರೌಢಶಾಲೆ, ಚೇಳ್ಯಾರು

ಉಪನ್ಯಾಸ : **ಶ್ರೀ ಜಯಾನಂದ ಚೇಳ್ಯಾರು**
ಸದಸ್ಯರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ವಿಷಯ : **ನಾರಾಯಣಗುರುಗಳ ಸಂತ ಸತ್ವ, ಶೂದ್ರ ಶಿವನ ಅನಾವರಣ**

**ಆತ್ಮೀಯ ಸ್ವಾಗತ**

**ಡಾ. ಗಣೇಶ್ ಅಮೀನ್ ಸಂಕಮಾರ್**
ಸಂಯೋಜಕರು, ಅಧ್ಯಯನ ಪೀಠ

**ಡಾ. ಕಿಶೋರ್ ಕುಮಾರ್ ಸಿ.ಕೆ.**
ಕುಲಸಚಿವರು, ಮಂಗಳೂರು ವಿ.ವಿ.

ಪ್ರೊ. ಜಯರಾಜ್ ಅಮೀನ್, ಡಾ. ಮಂಜುನಾಥ ಎ. ಕೋಟ್ಯಾನ್, ಶ್ರೀ ಪಿ.ವಿ. ಮೋಹನ್, ಶ್ರೀ ವಿಜಯಕುಮಾರ್ ಸೊರಕೆ, ಶ್ರೀ ಬಾಬು ಶಿವ ಪೂಜಾರಿ, ಶ್ರೀ ಸತೀಶ್ ಎನ್. ಕರ್ಕೇರ, ಶ್ರೀಮತಿ ನಮಿತಾ ಶಾಮ್, ಶ್ರೀ ಮೋಹನ್‌ರಾಜ್ ಕೆ.ಆರ್. – **ಪೀಠದ ಸದಸ್ಯರು**

ಸಾಕ್ಷಿ : **ಪ್ರೌಢಶಾಲಾ ವಿದ್ಯಾರ್ಥಿಗಳು**

ಶ್ರೀ ಜಯಾನಂದ ಚೇಳಾಯರು ಇವರಿಂದ ವಿಶೇಷ ಉಪನ್ಯಾಸ

**ಸಮಾರಂಭದ** ಸಾಕ್ಷಿ

ಮಾಧ್ಯಮ ಮನ್ನಣೆ

# ಭಾರತದ ಸಂತ ಸತ್ವ ಸರಣಿ ಉಪನ್ಯಾಸ

■ **ವಿಕ ಸುದ್ದಿಲೋಕ** ಮಂಗಳಗಂಗೋತ್ರಿ



''19ನೇ ಶತಮಾನದ ವಿಶ್ವಸಂತ ನಾರಾಯಣ ಗುರುಗಳು ದೇವರಿಂದ ವಂಚಿತರಾದವರಿಗೆ ದೇವರನ್ನು ನೀಡಿದ, ಪೂಜಿಸುವ ಅಧಿಕಾರ ಕೊಟ್ಟ ಸಂತ ಸತ್ವ. ಅವರಿಂದ ಶೂದ್ರ ಶಿವನ ಅನಾವರಣ ಆದುದು 19ನೇ ಶತಮಾನದ ದೊಡ್ಡ ಧಾರ್ಮಿಕ ಕ್ರಾಂತಿ'' ಎಂದು ಯುವ ಚಿಂತಕ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಜಯಾನಂದ ಚೇಳ್ಯಾರು ಹೇಳಿದರು.

ಅವರು ಚೇಳ್ಯಾರು ಸರಕಾರಿ ಪ್ರೌಢಶಾಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಅಧ್ಯಯನ ಪೀಠ ಸಂಯೋಜಿಸಿದ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ಪುಷ್ಪರಾಜ ಶೆಟ್ಟಿ ಮಾತನಾಡಿ, 'ವಿವಿ ಅಧ್ಯಯನ ಪೀಠ ನಾರಾಯಣ ಗುರುಗಳ ತತ್ವದ ಮೂಲಕ ಗ್ರಾಮೀಣ ಯುವ ಜನಾಂಗವನ್ನು ಸಾಮರಸ್ಯದ ಬದುಕಿಗೆ ಕೊಂಡು ಹೋಗುವ ಮಾರ್ಗದರ್ಶನ ನೀಡುತ್ತಿರುವುದು ಸಂತೋಷ'' ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕಿ ತೆರೇಸಾ ವೇಗಸ್ ಮಾತನಾಡಿ, '' ಭಾರತದ ಸರ್ವಧರ್ಮಗಳ ಸಾರ ನಾರಾಯಣ ಗುರುಗಳ ಸಂದೇಶದಲ್ಲಿದೆ. ಅವರು ಮತ ಧರ್ಮವನ್ನು ಮೀರಿ ನಿಂತ ವಿಶ್ವಗುರು'' ಎಂದರು.

ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಬಳಿಕ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು.

ವಿಜಯ ಕರ್ನಾಟಕ - 20-03-2023


# ಭಾರತದ ಸಂತ ಸತ್ವ ಸರಣಿ ಉಪನ್ಯಾಸ

■ **ವಿಕ ಸುದ್ದಿಲೋಕ** ಮಂಗಳಗಂಗೋತ್ರಿ





''19ನೇ ಶತಮಾನದ ವಿಶ್ವಸಂತ ನಾರಾಯಣ ಗುರುಗಳು ದೇವರಿಂದ ವಂಚಿತರಾದವರಿಗೆ ದೇವರನ್ನು ನೀಡಿದ, ಪೂಜಿಸುವ ಅಧಿಕಾರ ಕೊಟ್ಟ ಸಂತ ಸತ್ವ. ಅವರಿಂದ ಶೂದ್ರ ಶಿವನ ಅನಾವರಣ ಆದುದು 19ನೇ ಶತಮಾನದ ದೊಡ್ಡ ಧಾರ್ಮಿಕ ಕ್ರಾಂತಿ'' ಎಂದು ಯುವ ಚಿಂತಕ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಜಯಾನಂದ ಚೇಳ್ಯಾರು ಹೇಳಿದರು.

ಅವರು ಚೇಳ್ಯಾರು ಸರಕಾರಿ ಪ್ರೌಢಶಾಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಅಧ್ಯಯನ ಪೀಠ ಸಂಯೋಜಿಸಿದ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ಪುಷ್ಪರಾಜ ಶೆಟ್ಟಿ ಮಾತನಾಡಿ, 'ವಿವಿ ಅಧ್ಯಯನ ಪೀಠ ನಾರಾಯಣ ಗುರುಗಳ ತತ್ವದ ಮೂಲಕ ಗ್ರಾಮೀಣ ಯುವ ಜನಾಂಗವನ್ನು ಸಾಮರಸ್ಯದ ಬದುಕಿಗೆ ಕೊಂಡು ಹೋಗುವ ಮಾರ್ಗದರ್ಶನ ನೀಡುತ್ತಿರುವುದು ಸಂತೋಷ'' ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕಿ ತೆರೇಸಾ ವೇಗಸ್ ಮಾತನಾಡಿ, '' ಭಾರತದ ಸರ್ವಧರ್ಮಗಳ ಸಾರ ನಾರಾಯಣ ಗುರುಗಳ ಸಂದೇಶದಲ್ಲಿದೆ. ಅವರು ಮತ ಧರ್ಮವನ್ನು ಮೀರಿ ನಿಂತ ವಿಶ್ವಗುರು'' ಎಂದರು.

ಅಧ್ಯಯನ ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಬಳಿಕ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು.

ವಿಜಯ ಕರ್ನಾಟಕ - 20-03-2023



ವಿಶ್ರಾಂತ ಕನ್ನಡ ಸಾಹಿತ್ಯ ಪರಿಷತ್ ನ ರಾಜ್ಯ ಅಧ್ಯಕ್ಷರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಇವರಿಂದ ಉದ್ಘಾಟನೆ






ಡಾ. ವಾಸುದೇವ ಬೆಳ್ಳೆ ಇವರಿಂದ ವಿಶೇಷ ಉಪನ್ಯಾಸ – ಸಾಕ್ಷಿಯಾದ ಪುಟಾಣಿಗಳು

# ಮಾಧ್ಯಮ ಮನ್ನಣೆ

‘ಭಾರತದ ಸಂತಸತ್ವ ಶೋಧ ನಿನಾದ’ ಸಮಾರೋಪ | ಡಾ.ಹರಿಕೃಷ್ಣ ಪುನರೂರು ಅಭಿಪ್ರಾಯ

## ತುಳುನಾಡಿನ ಮಣ್ಣಿನಲ್ಲಿದೆ ಭಾರತದ ಸಂತಸತ್ವ

**ಕೊಣಾಜೆ:** ನಾರಾಯಣ ಗುರುಗಳು ಕಂಡ ಮನುಷ್ಯ ಧರ್ಮದ ತತ್ವ ತುಳುನಾಡಿನ ಮಣ್ಣಿನಲ್ಲಿದೆ. ಅದರೊಳಗೆ ಭಾರತದ ಸಂತಸತ್ವ ಅಡಗಿದೆ. ಕರಾವಳಿ ಕರ್ನಾಟಕ ದೈವ ದೇವರುಗಳ ನೆಲೆ. ಇಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಕೊಡುವ ಆಯುರ್ವೇದ ಸತ್ವ ರಿಷಿ ಪರಂಪರೆ ಮತ್ತು ಕೃಷಿ ಪರಂಪರೆಯಿಂದ ಪಕ್ವಗೊಂಡಿದೆ. ಎಂದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಹರಿಕೃಷ್ಣ ಪುನರೂರು ಹೇಳಿದ್ದಾರೆ.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆದ ‘ಭಾರತದ ಸಂತಸತ್ವ ಶೋಧ ನಿನಾದ’, ಕಾರ್ಯಕ್ರಮದ ಉದ್ಘಾಟನೆ ಯನ್ನು ನೆರವೇರಿಸಿ ಮಾತನಾಡಿದರು.

ಸ್ವರ್ಗದ ಕಾಮಧೇನುವಿನ ಮಗಳು ನಂದಿನಿ ಹೊಳೆಯಾಗಿ ಹರಿಯುವ ಈ ನಿಸರ್ಗದತ್ತ ವಾತಾವರಣದಲ್ಲಿ ವಿದ್ಯಾರ್ಥಿಗಳ ನಿನಾದದೊಂದಿಗೆ ನಡೆಯುತ್ತಿರುವ ಸಂತಸತ್ವ ಸಮಾರೋಪ ಅರ್ಥಪೂರ್ಣ ಎಂದರು.



ಅಧ್ಯಕ್ಷತೆಯನ್ನು ಖ್ಯಾತ ಉದ್ಯಮಿ ಧಾರ್ಮಿಕ ಸಾಮಾಜಿಕ ಮುಖಂಡರಾದ ಕಡಂಬೋಡಿ ಮಹಾಬಲ ಪೂಜಾರಿ ವಹಿಸಿದ್ದರು. ಮೂಲ್ಕಿ ಸರಕಾರಿ ಪ.ಪೂ. ಕಾಲೇಜಿನ ಪ್ರಾಂಶುಪಾಲ ಪ್ರಗತಿಪರ ಚಿಂತಕ ಡಾ. ವಾಸುದೇವ ಬೆಳ್ಳೆ ‘ಶಾಂತಿಯ ಕ್ರಾಂತಿ, ನಾರಾಯಣ ಗುರು’ ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಮಂಗಳೂರು ಇದರ ವರಿಷ್ಠ ಪ್ರಬಂಧಕ ಯಾದವ ದೇವಾಡಿಗ, ಕಾಟಿಪಳ್ಳ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಅಧ್ಯಕ್ಷರಾದ ಪಿ. ದಯಾಕರ್ ಅತಿಥಿಗಳಾಗಿದ್ದರು. ಕುಸುಮಾ ಮಹಾಬಲ ಪೂಜಾರಿ, ಗುಣವತಿ ರಮೇಶ್, ಪುಷ್ಪಲತಾ ರಾವ್, ಅನು ಕಡಂಬೋಡಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮತ್ತು ತುಳುನಾಡಿನ ಜನಪದ ಕ್ರೀಡೆ ತಪ್ಪಂಗಾಯಿ ಪ್ರಮುಖ ಆಕರ್ಷಣೆಯಾಗಿತ್ತು.‘ನಂದಿನಿಗೊಂದುಸುತ್ತು’ ಕಾರ್ಯಕ್ರಮದಲ್ಲಿ ಗ್ರಾಮೀಣ ಪರಿಸರದ ಜಾನಪದಮತ್ತುಪೌರಾಣಿಕಹಿನ್ನೆಲೆಯಮಹತ್ವ ‘ಕಂಡೆವು ಆಡೆವು’ ಗಾದೆಯ ವೈಶಿಷ್ಟ್ಯವನ್ನು ವಿವರಿಸಲಾಯಿತು. ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ, ಉಪನ್ಯಾಸಕಿ ಅನು ಸಂಕಮಾರ್ ನಿರೂಪಿಸಿದರು.

## ‘ತುಳುನಾಡಿನ ಮಣ್ಣಿನಲ್ಲಿ ಸಂತ ಸತ್ವ’

ಪ್ರಜಾವಾಣಿ ವಾರ್ತೆ

**ಮುಡಿಪು:** ‘ನಾರಾಯಣ ಗುರುಗಳು ಕಂಡ ಮನುಷ್ಯ ಧರ್ಮದ ತತ್ವ ತುಳುನಾಡಿನ ಮಣ್ಣಿನಲ್ಲಿದೆ. ಅದರೊಳಗೆ ಭಾರತದ ಸಂತ ಸತ್ವ ಅಡಗಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಪಾವಂಜೆ ನಿನಾದ ರಂಗಮಂದಿರದಲ್ಲಿ ನಡೆದ ‘ಭಾರತದ ಸಂತಸತ್ವ ಶೋಧ ನಿನಾದ’ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು.

‘ಕರಾವಳಿ ಕರ್ನಾಟಕ ದೈವ ದೇವರುಗಳ ನೆಲೆ. ಇಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕೊಡುವ ಆಯುರ್ವೇದ ಸತ್ವ ರಿಷಿ ಪರಂಪರೆ ಮತ್ತು ಕೃಷಿ ಪರಂಪರೆಯಿಂದ ಪಕ್ವಗೊಂಡಿದೆ’ ಎಂದರು.

ಉದ್ಯಮಿ ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಮೂಲ್ಕಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ ‘ಶಾಂತಿಯ ಕ್ರಾಂತಿ- ನಾರಾಯಣ ಗುರು’ ಎಂಬ ವಿಷಯವಾಗಿ ಉಪನ್ಯಾಸ ನೀಡಿದರು.



ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಪಾವಂಜೆ ನಿನಾದ ರಂಗಮಂದಿರದಲ್ಲಿ ನಡೆದ ‘ಭಾರತದ ಸಂತಸತ್ವ ಶೋಧ ನಿನಾದ’ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಉದ್ಘಾಟಿಸಿದರು

ಓರಿಯಂಟಲ್ ವಿಮಾ ಕಂಪನಿಯ ಪ್ರಬಂಧಕ ಯಾದವ ದೇವಾಡಿಗ, ಕಾಟಿಪಳ್ಳ ನಾರಾಯಣ ಗುರು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಪಿ. ದಯಾಕರ್ ಭಾಗವಹಿಸಿದ್ದರು. ಕುಸುಮಾ ಮಹಾಬಲ ಪೂಜಾರಿ, ಗುಣವತಿ ರಮೇಶ್, ಪುಷ್ಪಲತಾ ರಾವ್, ಅನು ಕಡಂಬೋಡಿ ಇದ್ದರು. ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮತ್ತು ತುಳುನಾಡಿನ ಜನಪದ ಕ್ರೀಡೆ ತಪ್ಪಂಗಾಯಿ ಪ್ರಮುಖ ಆಕರ್ಷಣೆಯಾಗಿತ್ತು, ನಂದಿನಿಗೊಂದು ಸುತ್ತು ಕಾರ್ಯಕ್ರಮದಲ್ಲಿ ಗ್ರಾಮೀಣ ಪರಿಸರದ ಜಾನಪದ ಮತ್ತು ಪೌರಾಣಿಕ ಹಿನ್ನೆಲೆಯ ಮಹತ್ವ ‘ಕಂಡೆವು ಆಡೆವು’ ಗಾದೆಯ ವೈಶಿಷ್ಟ್ಯವನ್ನು ವಿವರಿಸಲಾಯಿತು.

ನಾರಾಯಣಗುರು ಅಧ್ಯಯನ ಪೀಠದ ನಿರ್ದೇಶಕ ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಉಪನ್ಯಾಸಕಿ ಅನು ಸಂಕಮಾರ್ ಕಾರ್ಯಕ್ರಮ ನಿರ್ವಹಿಸಿದರು.

ಡಾ.ಹರಿಕೃಷ್ಣ ಪುನರೂರು ಅನಿಸಿಕೆ | ಪಾವಂಜೆಯಲ್ಲಿ ನಂದಿನಿಗೊಂದು ಸುತ್ತು

# ಜಾನಪದ ಸತ್ವದ ಅರಿವು ಪೂರಕ



ಪಾವಂಜೆ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದಲ್ಲಿ ಶನಿವಾರ ಶೋಧ- ನಿನಾದ, ನಂದಿನಿಗೊಂದು ಸುತ್ತು-ನಿನಾದ ನೆನಪು ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ.ಹರಿಕೃಷ್ಣ ಪುನರೂರು ಉದ್ಘಾಟಿಸಿದರು. ಮೂಲ್ಕಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ, ಪ್ರಮುಖರಾದ ಕಡಂಬೋಡಿ ಮಹಾಬಲ ಪೂಜಾರಿ, ದಯಾಕರ ಪಿ.ಕುಳಾಯಿ ಇದ್ದರು.

■ ವಿಜಯವಾಣಿ ಸುದ್ದಿಜಾಲ ಹಳೆಯಂಗಡಿ

ಜಾತ್ಯತೀತ ತತ್ವ ಸಿದ್ಧಾಂತಗಳ ಮೂಲಕ ಸಮಾಜವನ್ನು ಸಂಘಟಿಸಿ ಬಲಗೊಳಿಸುವಲ್ಲಿ ನಾರಾಯಣ ಗುರುಗಳ ತತ್ವ ಆದರ್ಶ ಸರ್ವಕಾಲಕ್ಕೂ ಪ್ರಸ್ತುತ. ವಿದ್ಯಾರ್ಥಿಗಳಿಗೆ ಜಾನಪದ ಸತ್ವದ ಅರಿವು, ಪ್ರಾದೇಶಿಕ ತಿಳಿವಳಿಕೆ ಜತೆಗೆ ಸಂಸ್ಕೃತಿ ಅಧ್ಯಯನ ಪೂರಕ ಕಾರ್ಯಕ್ರಮ ಅಭಿನಂದನೀಯ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಧರ್ಮದರ್ಶಿ ಡಾ.ಹರಿಕೃಷ್ಣ ಪುನರೂರು ಹೇಳಿದರು.

ಪಾವಂಜೆ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದಲ್ಲಿ ಶನಿವಾರ ಮಂಗಳೂರು ವಿಶ್ವವಿದ್ಯಾಲಯ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಮಂಗಳಗಂಗೋತ್ರಿ ಸಂಯೋಜನೆಯಲ್ಲಿ ಪಾವಂಜೆ ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರ ಸಹಯೋಗದಲ್ಲಿ 'ಶೋಧ- ನಿನಾದ, ನಂದಿನಿಗೊಂದು ಸುತ್ತು- ನಿನಾದ ನೆನಪು' ಹಾಗೂ ಭಾರತದ ಸಂತ ಸತ್ವದ ಸಮಾರೋಪ ಸಮಾರೋಪ ಉದ್ಘಾಟಿಸಿ ಅವರು ಮಾತನಾಡಿದರು.

> ಪ್ರಾದೇಶಿಕ ಸಂಸ್ಕೃತಿ ಸಂಸ್ಕಾರಗಳ ತಿಳಿವಳಿಕೆ ಜತೆಗೆ ಬೌದ್ಧಿಕ ಮತ್ತು ಶಾರೀರಿಕ ಅಭಿವೃದ್ಧಿಯ ಅರಿವು ಎಳವೆಯಲ್ಲಿಯೇ ಬಹಳ ಅಗತ್ಯ. ಆರೋಗ್ಯವಂತ ಸಮಾಜದಿಂದ ಅಭಿವೃದ್ಧಿ ಸಾಧ್ಯ.
>
> | ಯಾದವ ದೇವಾಡಿಗ ಯೋಗ ತರಬೇತುದಾರ

> ಶೈಕ್ಷಣಿಕ ಪಠ್ಯಕ್ರಮದಲ್ಲಿ ಸ್ಥಳೀಯ ಸಮಾಜ ಸುಧಾರಕರು ಮತ್ತು ಧಾರ್ಮಿಕ ಸಾಂಸ್ಕೃತಿಕ ಕೇಂದ್ರಗಳ ಬಗ್ಗೆ ತಿಳಿವಳಿಕೆ ಕೊರತೆ ಇದೆ. ಪಾವಂಜೆ ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಬೆಳಕು ಚೆಲ್ಲುವ ಕಾರ್ಯ ನಡೆಯುತ್ತಿದೆ.
>
> | ಡಾ. ಗಣೇಶ್ ಅಮೀನ್ ಸಂಕಮಾರ್
> ಸಂಚಾಲಕ, ತುಳು ಸಂಸ್ಕೃತಿ ಅಧ್ಯಯನ ಕೇಂದ್ರ

ಮೂಲ್ಕಿ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ 'ಶಾಂತಿಯ ಕ್ರಾಂತಿ ಸಂತ ನಾರಾಯಣಗುರು' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಧಾರ್ಮಿಕ ಮುಖಂಡ ಕಡಂಬೋಡಿ ಮಹಾಬಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕಾಟಿಪಳ್ಳ ಶ್ರೀನಾರಾಯಣ ಗುರು ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ದಯಾಕರ ಪಿ.ಕುಳಾಯಿ, ಓರಿಯಂಟಲ್ ಇನ್ಶೂರೆನ್ಸ್ ವರಿಷ್ಠ ಪ್ರಬಂಧಕ ಯಾದವ ದೇವಾಡಿಗ ಹಳೆಯಂಗಡಿ, ಕುಸುಮಾ ಕಡಂಬೋಡಿ, ಅನು ಕಡಂಬೋಡಿ, ಉದ್ಯಮಿ ಗೋಪಾಲಕೃಷ್ಣ, ಭೋಜ ಅಂಚನ್, ಅಧ್ಯಯನ ಪೀಠದ ಸಂಯೋಜಕ ಡಾ.ಗಣೇಶ್ ಅಮೀನ್ ಸಂಕಮಾರ್, ಕಾಟಿಪಳ್ಳ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆ ಮುಖ್ಯಶಿಕ್ಷಕರಾದ ಗುಣಾವತಿ ರಮೇಶ್, ಪುಷ್ಪಲತಾ ರಾವ್, ಶಿಕ್ಷಕರು ಹಾಗೂ ಪಾವಂಜೆ ನಿನಾದ ತುಳು ಸಂಸ್ಕೃತಿ ಅಧ್ಯಯನ ಕೇಂದ್ರದ ಸದಸ್ಯರು ಹಾಜರಿದ್ದರು.

ಡಾ.ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಅನು, ಭವ ಸಂಕಮಾರ್ ಕಾರ್ಯಕ್ರಮ ನಿರೂಪಿಸಿದರು.

## ವಿದ್ಯಾರ್ಥಿಗಳಿಗೆ ಆಟ, ಅಧ್ಯಯನ ಭೇಟಿ

ವಿದ್ಯಾರ್ಥಿಗಳಿಗೆ ತಪ್ಪಂಗಾಯಿ ಸ್ಪರ್ಧೆ, ನಂದಿನಿ ನದಿ ಪರಿಸರದ ಖಂಡಿಗೆಬೀಡು ಉಳ್ಳಾಯ ಕ್ಷೇತ್ರ ಸಹಿತ ಧಾರ್ಮಿಕ ಸ್ಥಳಗಳಿಗೆ ಭೇಟಿ, ಸಂಸ್ಕೃತಿ ಶೋಧ ಹಾಗೂ ಪರಿಸರ ಅಧ್ಯಯನ ನಡೆಯಿತು. ಕೊನೆಗೆ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದ ಅನುಭವ ಬಗ್ಗೆ ರಸಪ್ರಶ್ನೆ ನಡೆಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು.

---

**ಭಾರತದ ಸಂತ ಸತ್ವ ವಿಶೇಷ ಉಪನ್ಯಾಸ- ಬೆಂಗಳೂರು** **03.07.2023**

ಸೋಲೂರು ಮಠದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪೀಠದ ನಿರ್ದೇಶಕರು, ಸ್ವಾಮೀಜಿ ಹಾಗೂ ಇತರ ಗಣ್ಯರು

ಶ್ರೀ ಶ್ರೀ ಶ್ರೀ ವಿಖ್ಯಾತಾನಂದ ಸ್ವಾಮಿಜಿ ಅವರಿಂದ ಆಶೀರ್ವಚನ

**ಮಾಧ್ಯಮ ಮನ್ನಣೆ**

**2022 ರ ನಾರಾಯಣಗುರು ಸಂಶೋಧನಾ ಪ್ರಶಸ್ತಿಯ ಪತ್ರಿಕಾ ವರದಿ**



# ರಾಜಶ್ರೀ ರೈ ಅವರಿಗೆ ಪ್ರಶಸ್ತಿ

ಉಳ್ಳಾಲ, ಜು. 10: ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2022ರ 'ನಾರಾಯಣಗುರು ಸಂಶೋಧನ ಪ್ರಶಸ್ತಿ'ಗೆ ಗಡಿನಾಡು ಕಾಸರಗೋಡಿನ ಪೆರ್ಲದ ಯುವ ಲೇಖಕಿ ರಾಜಶ್ರೀ ಟಿ. ರೈ ಪೆರ್ಲ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 10 ಸಾವಿರ ರೂ.ಗಳ ನಗದು ಮೊತ್ತವನ್ನು ಒಳಗೊಂಡಿದ್ದು, ಪುರಸ್ಕೃತ ಕೃತಿಯು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಮೂಲಕ ಮುದ್ರಣಗೊಂಡು ಪ್ರಶಸ್ತಿ ಪ್ರದಾನ ಸಮಾರಂಭದಂದು ಬಿಡುಗಡೆಯಾಗಲಿದೆ ಎಂದು ವಿ.ವಿ.ಯ ಪ್ರಕಟನೆ ತಿಳಿಸಿದೆ.

**ನಾರಾಯಣ ಗುರು ಜಯಂತಿ 2023 ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ** **16.09.2023**

ಗಣ್ಯರಿಂದ ಕಾರ್ಯಕ್ರಮದ ಉದ್ಘಾಟನೆ



ಮಂಗಳೂರು ವಿ.ವಿ. ಕುಲಪತಿಗಳಾದ ಪ್ರೊ. ಜಯರಾಜ್ ಅಮೀನ್ ಅವರಿಂದ ಉದ್ಘಾಟನಾ ಭಾಷಣ




**2022 ರ ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ರಾಜಶ್ರೀ ಟಿ. ರೈ ಪೆರ್ಲ ಇವರಿಂದ ವಿಶೇಷ ಉಪನ್ಯಾಸ**

## ಮಾಧ್ಯಮ ಮನ್ನಣೆ



### ಪ್ರಶಸ್ತಿ ಪ್ರದಾನ, ಗುರು ಜಯಂತಿ ಆಚರಣೆ

# 'ವಿ.ವಿ.ಗಳು ಮನುಷ್ಯತ್ವ ರೂಪಿಸುವ ಕೇಂದ್ರವಾಗಲಿ'

ಮಂಗಳಗಂಗೋತ್ರಿ, ಸೆ. 16: ವಿಶ್ವ ವಿದ್ಯಾನಿಲಯಗಳೆಂದರೆ ಕಟ್ಟಡಗಳ ಸಮುಚ್ಚಯವಲ್ಲ ಯುವ ಜನಾಂಗದ ಬುದ್ಧಿ ಮನಸ್ಸುಗಳನ್ನು ಬೆಸೆದು ಮನುಷ್ಯತ್ವವನ್ನು ರೂಪಿಸುವ ಕೇಂದ್ರವಾಗಬೇಕು ಎಂದು ವಿಶ್ರಾಂತ ಕುಲಪತಿ ಮತ್ತು ಜಾನಪದ ವಿದ್ವಾಂಸ ಡಾ। ಕೆ. ಚಿನಪ್ಪ ಗೌಡ ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾನಿಲಯದ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಗುರು ಜಯಂತಿ ಆಚರಣೆಯ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ। ಜಯರಾಜ್ ಅಮೀನ್ ವಹಿಸಿ, ನಾರಾಯಣ ಗುರುಗಳ ಚಿಂತನೆ, ತತ್ವಗಳನ್ನು ವಿದ್ಯಾರ್ಥಿಗಳು ಅರಿತಾಗ ಮಾತ್ರ ಸಮಾಜ ಪರಿವರ್ತನೆ ಸಾಧ್ಯ ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿದ ಮಾಜಿ ಸಚಿವ ಕೆ. ಅಭಯಚಂದ್ರ ಮಾತನಾಡಿ, ನಾರಾಯಣ ಗುರುಗಳು ಸಮಾಜ ಪರಿವರ್ತನೆಯ ಹರಿಕಾರ ಅವರ ತತ್ವಗಳು ಚಿಂತನೆಗಳು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಆಗಬೇಕು. ಆಗ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ ಎಂದರು.

ಪ್ರಶಸ್ತಿ ಪುರಸ್ಕೃತೆ ರಾಜಶ್ರೀ ಟಿ. ರೈ ಪೆರ್ಲ ಉಪನ್ಯಾಸ ನೀಡಿದರು. ಕಾಟಿಪಳ್ಳ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪಿ. ದಯಕರ್, ಅಧ್ಯಯನ ಪೀಠದ ಸದಸ್ಯರಾದ ವಿಜಯಕುಮಾರ್ ಸೊರಕೆ, ನಮಿತಾ ಶಾಮ್, ಸಂಶೋಧನ ಸಹಾಯಕ ಡಾ। ರವಿರಾಜ್ ಉಪಸ್ಥಿತರಿದ್ದರು ಮಲ್ಲಿಕಾ ಭಾನುಪ್ರಕಾಶ್ ಮತ್ತು ಬಳಗದವರಿಂದ 'ಸಂತಸತ್ವ ಪದ' ನಡೆಯಿತು.

ಪೀಠದ ನಿರ್ದೇಶಕ ಡಾ। ಗಣೇಶ್ ಅಮೀನ್ ಸಂಕಮಾರ್ ಅವರು ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಡಾ। ಧನಂಜಯ ಕುಂಬಳೆ ಕಾರ್ಯಕ್ರಮ ನಿರ್ವಹಿಸಿದರು. ಡಾ। ಯಶುಕುಮಾರ್ ವಂದಿಸಿದರು.

ಮಂವಿವಿಯಲ್ಲಿ ನಾರಾಯಣಗುರು ಜಯಂತಿ, ಪ್ರಶಸ್ತಿ ಪ್ರದಾನ ಸಮಾರಂಭ

# ವಿವಿಗಳಲ್ಲಿ ಬುದ್ಧಿ, ಮನಸ್ಸು ಬೆಸೆಯುವ ಅಧ್ಯಯನ ನಡೆಯಲಿ: ಕೆ. ಚಿನ್ನಪ್ಪಗೌಡ



■ ವಿಕ ಸುದ್ದಿಲೋಕ ಮಂಗಳಗಂಗೋತ್ರಿ

"ವಿಶ್ವವಿದ್ಯಾಲಯಗಳೆಂದರೆ ಕಟ್ಟಡಗಳ ಸಮುಚ್ಚಯವಲ್ಲ, ಯುವ ಜನಾಂಗದ ಬುದ್ಧಿ ಮನಸ್ಸುಗಳನ್ನು ಬೆಸೆದು ಮನುಷ್ಯತ್ವವನ್ನು ರೂಪಿಸುವ ಕೇಂದ್ರವಾಗಬೇಕು," ಎಂದು ವಿಶ್ರಾಂತ ಪ್ರಾಧ್ಯಾಪಕ, ಜಾನಪದ ವಿದ್ವಾಂಸ ಡಾ. ಕೆ. ಚಿನ್ನಪ್ಪಗೌಡ ಅಭಿಪ್ರಾಯ ಪಟ್ಟರು.

ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಅಧ್ಯಯನ ಪೀಠದ ಸಂಯೋಜನೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ನಾರಾಯಣಗುರು ಜಯಂತಿ ಆಚರಣೆ ಸಂದರ್ಭ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ. ಜಯರಾಜ್ ಅಮೀನ್ ಅಧ್ಯಕ್ಷತೆ ವಹಿಸಿದ್ದರು. ಪ್ರಶಸ್ತಿ ಪ್ರದಾನ ಮಾಡಿದ ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಮಾತನಾಡಿ, "ನಾರಾಯಣಗುರುಗಳು ಸಮಾಜ ಪರಿವರ್ತನೆಯ ಹರಿಕಾರ. ಅವರ ತತ್ವಗಳು ಚಿಂತನೆಗಳು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಆಗಬೇಕು. ಆಗ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ," ಎಂದರು.

> ನಾರಾಯಣ ಗುರುಗಳ ಚಿಂತನೆಯನ್ನು ತತ್ವಗಳನ್ನು ವಿದ್ಯಾರ್ಥಿಗಳು ಅರಿತಾಗ ಮಾತ್ರ ಸಮಾಜ ಪರಿವರ್ತನೆ ಸಾಧ್ಯ..
> **-ಪ್ರೊ. ಜಯರಾಜ್ ಅಮೀನ್**
> ಪ್ರಭಾರ ಕುಲಪತಿ, ಮಂಗಳೂರು ವಿವಿ

ಪ್ರಶಸ್ತಿ ಪುರಸ್ಕೃತ ರಾಜಶ್ರೀ ಟಿ. ರೈ ಪೆರ್ಲ ಪ್ರಧಾನ ಉಪನ್ಯಾಸ ನೀಡಿ, "ನಾರಾಯಣ ಗುರುಗಳು ಹುಟ್ಟಿದ ಮತ್ತು ಕೇರಳದಲ್ಲಿ ದೇವಾಲಯವನ್ನು ಸ್ಥಾಪಿಸಿದ ಅವರು ತಪಸ್ಸು ಮಾಡಿದ ಮತ್ತು ಸಮಾಧಿಯಾದ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಗುರುಗಳ ಪ್ರೇರಣೆಯಿಂದ ಮಾತ್ರ ಈ ಸಂಶೋಧನಾ ಕೃತಿ ಬರೆಯಲು ಸಾಧ್ಯವಾಯಿತು," ಎಂದರು.

ಕಾಟಿಪಳ್ಳ ನಾರಾಯಣಗುರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪಿ. ದಯಾಕರ್, "ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಮಟ್ಟದಲ್ಲಿ ನಾರಾಯಣ ಗುರುಗಳಂತಹ ವಿಶ್ವ ಸಂತರ ತತ್ವಗಳನ್ನು ಕಲಿತಾಗ ಮಾತ್ರ ವಿಶ್ವಮಾನವ ಧರ್ಮದ ಅನಾವರಣ ಸಾಧ್ಯ," ಎಂದರು.

ಮಲ್ಲಿಕಾ ಭಾನುಪ್ರಕಾಶ್ ಮತ್ತು ಬಳಗದವರಿಂದ ಸಂತ ತತ್ವಪದ ನಡೆಯಿತು. ಅಧ್ಯಯನ ಪೀಠದ ಸದಸ್ಯ ವಿಜಯ ಕುಮಾರ್ ಸೊರಕೆ, ನಮಿತಾ ಶ್ಯಾಮ್, ಸಂಶೋಧನಾ ಸಹಾಯಕ ಡಾ. ರವಿರಾಜ್ ಉಪಸ್ಥಿತರಿದ್ದರು. ಪೀಠದ ನಿರ್ದೇಶಕ ಡಾ. ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಡಾ. ಧನಂಜಯ ಕುಂಬಳೆ ನಿರೂಪಿಸಿದರು. ಡಾ. ಯಶು ಕುಮಾರ್ ವಂದಿಸಿದರು.

---

ರಾಜಶ್ರೀ ಟಿ.ರೈ ಪೆರ್ಲಗೆ ಸಂಶೋಧನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಿನ್ನಪ್ಪಗೌಡ ಅಭಿಮತ

# ನಾರಾಯಣಗುರು ಆಧುನಿಕ ಚಿಂತನೆಯ ಸಂತ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ನಾರಾಯಣಗುರುಗಳ ಚಿಂತನಾ ಕ್ರಮ ಶ್ರೇಷ್ಠ
- ಮನುಷ್ಯತ್ವ ರೂಪಿಸುವ ಕಾರ್ಯ ಅಗತ್ಯ
- ಗುರುಗಳ ಚಿಂತನೆ ಅಳವಡಿಸಿಕೊಳ್ಳಲು ಸಲಹೆ

ಮುಡಿಪು: ಅಂಚಿಗೆ ಸರಿದವರನ್ನು ತಮ್ಮ ಚಿಂತನೆಯ ಕೇಂದ್ರಕ್ಕೆ ತಂದು ನೋಡಿದ ಸಂತ ಪರಂಪರೆಯ ಸಾಲಿನಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಬಹಳ ಮುಖ್ಯವಾಗಿ ಕಾಣುತ್ತಾರೆ. ಅವರು ಪರಂಪರೆಯ ಜ್ಞಾನವಿರುವ ಮತ್ತು ಆಧುನಿಕತೆಯ ಚಿಂತನೆಗಳಿರುವ ಶ್ರೇಷ್ಠ ಜ್ಞಾನಿ, ಸಂತ ಎಂದು ಜಾನಪದ ವಿದ್ವಾಂಸ ಪ್ರೊ. ಕೆ.ಚಿನ್ನಪ್ಪ ಗೌಡ ಹೇಳಿದರು.

ಮಂಗಳೂರು ವಿವಿ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ಶನಿವಾರ ನಡೆದ ಗುರುಜಯಂತಿ 2023 ಕಾರ್ಯಕ್ರಮ ಹಾಗೂ ರಾಜಶ್ರೀ ರೈ ಪೆರ್ಲ ಅವರಿಗೆ ನಾರಾಯಣ ಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣ ವಂಚಿತರನ್ನು, ಶೋಷಿತರನ್ನು, ಹಿಂದುಳಿದ ಗೇಣಿಗಾರರನ್ನು ಮುಖ್ಯವಾಗಿರಿಸಿಕೊಂಡ ನಾರಾಯಣ ಗುರುಗಳ ಹೋರಾಟ, ಚಿಂತನಾ ಕ್ರಮ ಶ್ರೇಷ್ಠವಾದುದು. ರಾಜಶ್ರೀ ಟಿ.ರೈ ಪೆರ್ಲ ಅವರು ನಾರಾಯಣ ಗುರುಗಳ ಬಗ್ಗೆ ವಿಸ್ತಾರವಾದ ಅಧ್ಯಯನ, ಕ್ಷೇತ್ರ ಕಾರ್ಯದ ಸಂಶೋಧನಾ ಕೃತಿ ರಚಿಸಿ ಸಂಶೋಧನೆಗೆ ಹೊಸ ಆಯಾಮ ಕೊಟ್ಟಿದ್ದಾರೆ ಎಂದರು.

ವಿಶ್ವವಿದ್ಯಾಲಯಗಳೆಂದರೆ ಕಟ್ಟಡಗಳ ಸಮುಚ್ಚಯವಲ್ಲ. ಯುವ ಜನಾಂಗದ ಬುದ್ಧಿ, ಮನಸ್ಸುಗಳನ್ನು ಬೆಸೆದು ಮನುಷ್ಯತ್ವವನ್ನು ರೂಪಿಸುವ ಕೇಂದ್ರವಾಗಬೇಕು ಎಂದರು.

ಮಾಜಿ ಸಚಿವ ಅಭಯಚಂದ್ರ ಜೈನ್ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯೆಯೇ ನಮ್ಮ ಬದುಕನ್ನು ಸಾರ್ಥಕಗೊಳಿಸುತ್ತದೆ ಎಂಬುದನ್ನು ಇಂದಿನ ಯುವ ಸಮೂಹ ಅರ್ಥ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿವಿ ಕುಲಪತಿ ಪ್ರೊ. ಜಯರಾಜ್ ಅಮೀನ್, ನಾರಾಯಣ ಗುರುಗಳ ಚಿಂತನೆಯನ್ನು ನಾವು ಮೈಗೂಡಿಸಿಕೊಂಡರೆ ಸಮಾಜದ ಎಲ್ಲ ಸಮಸ್ಯೆಗಳೂ ಪರಿಹಾರ ಸಿಗುತ್ತದೆ. ನಾರಾಯಣ ಗುರು ಅವರ ಚಿಂತನೆ ಒಂದು ಪ್ರದೇಶ, ಒಂದು ಸಮುದಾಯಕ್ಕೆ ಸೀಮಿತವಲ್ಲ, ಅವರು ಜಗತ್ತಿನ ಶ್ರೇಷ್ಠ ಸಂತ ಎಂದರು.

ಪ್ರಶಸ್ತಿ ಸ್ವೀಕರಿಸಿದ ರಾಜಶ್ರೀ ಟಿ.ರೈ ಪೆರ್ಲ ಮಾತನಾಡಿ, ತತ್ವಶಾಸ್ತ್ರ ಅಧ್ಯಯನಕ್ಕೆ ಸಂಬಂಧಿಸಿ ಇಂದಿನ ವಿದ್ಯಾರ್ಥಿಗಳಲ್ಲಿ ಆಸಕ್ತಿ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ಭಾರತೀಯ ಸಂತ ತತ್ವದ ಮಹತ್ವ ತಿಳಿದುಕೊಂಡು ಅರಿವಿನ ಹಾದಿಯಲ್ಲಿ ಮುನ್ನಡೆಯಬೇಕಿದೆ ಎಂದರು.

ಕಾಟಿಪಳ್ಳ ನಾರಾಯಣ ಗುರು ವಿದ್ಯಾಸಂಸ್ಥೆಯ ಅಧ್ಯಕ್ಷ ಪಿ.ದಯಾಕರ್, ನಾರಾಯಣ ಗುರು ಪೀಠದ ಸದಸ್ಯರಾದ ವಿಜಯ ಕುಮಾರ್ ಸೊರಕೆ, ನಮಿತಾ ಶಾಮ್ ಇದ್ದರು.

ಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜಕರಾದ ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿದರು. ಯಶುಕುಮಾರ್ ಪ್ರಶಸ್ತಿ ಪತ್ರ ವಾಚಿಸಿದರು. ಪ್ರಾಧ್ಯಾಪಕ ಧನಂಜಯ ಕುಂಬ್ಳೆ ಕಾರ್ಯಕ್ರಮ ನಿರೂಪಿಸಿದರು. ಮಲ್ಲಿಕಾ ಭಾನುಪ್ರಕಾಶ್ ಮತ್ತು ಬಳಗದವರಿಂದ ಸಂತತತ್ವ ಪದ ನಡೆಯಿತು.



ರಾಜಶ್ರೀ ಟಿ.ರೈ ಪೆರ್ಲ ಅವರಿಗೆ ನಾರಾಯಣಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು

## ಮಂಗಳೂರು ವಿ.ವಿ.ಯಲ್ಲಿ 'ಗುರುಜಯಂತಿ', ರಾಜಶ್ರೀ ರೈಗೆ 'ನಾರಾಯಣಗುರು ಸಂಶೋಧನಾ' ಪ್ರಶಸ್ತಿ ಪ್ರದಾನ

# ವಿವಿಗಳು ವ್ಯಕ್ತಿತ್ವ ರೂಪಿಸುವ ಕೇಂದ್ರಗಳಾಗಲಿ: ಪ್ರೊ.ಚಿನ್ನಪ್ಪ ಗೌಡ



**ಕೊಣಾಜೆ:** ವಿಶ್ವವಿದ್ಯಾನಿಲಯಗಳು ಎಂದರೆ ಕೇವಲ ಕಟ್ಟಡಗಳ ಸಮುಚ್ಚಯವಲ್ಲ, ಯುವ ಜನಾಂಗದ ಬುದ್ಧಿ, ಮನಸ್ಸುಗಳನ್ನು ಬೆಸೆದು ಮನುಷ್ಯತ್ವವನ್ನು ರೂಪಿಸುವ ಕೇಂದ್ರವಾಗಬೇಕು. ಬ್ರಹ್ಮಶ್ರೀ ನಾರಾಯಣ ಗುರುಗಳು ಮುಖ್ಯಸ್ಥಾನದಲ್ಲಿ ನಿಲ್ಲುತ್ತಾರೆ ಎಂದು ಹಾವೇರಿ ವಿ.ವಿ. ವಿಶ್ರಾಂತ ಕುಲಪತಿ ಪ್ರೊ.ಕೆ.ಚಿನ್ನಪ್ಪ ಗೌಡ ಹೇಳಿದ್ದಾರೆ.

ಅವರು ಮಂಗಳೂರು ವಿವಿ ನಾರಾಯಣ ಗುರು ಅಧ್ಯಯನ ಪೀಠ ಇವರ ಆಶ್ರಯದಲ್ಲಿ ಶನಿವಾರ ನಡೆದ 'ಗುರುಜಯಂತಿ – 2023' ಕಾರ್ಯಕ್ರಮ ಹಾಗೂ ರಾಜಶ್ರೀ ರೈ ಪೆರ್ಲ ಅವರಿಗೆ ನಾರಾಯಣ ಗುರು ಸಂಶೋಧನಾ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದರು.

**ಸಂಶೋಧನೆಗೆ ಹೊಸ ಆಯಾಮ ಕೊಟ್ಟಿದ್ದಾರೆ**

ರಾಜಶ್ರೀ ಟಿ. ರೈ ಪೆರ್ಲ ಅವರು ನಾರಾಯಣ ಗುರುಗಳ ಬಗ್ಗೆ ವಿಸ್ತಾರವಾದ ಅಧ್ಯಯನ, ಕ್ಷೇತ್ರ ಕಾರ್ಯದ ಸಂಶೋಧನಾ ಕೃತಿ ರಚಿಸಿ, ಸಂಶೋಧನೆಗೆ ಹೊಸ ಆಯಾಮ ಕೊಟ್ಟಿದ್ದಾರೆ. ಈ ಪ್ರಶಸ್ತಿ ಅವರಿಗೆ ಅರ್ಹವಾಗಿಯೇ ಸಂದಿದೆ ಎಂದರು.

**ಗುರುಗಳು ಸುಧಾರಣೆ ಕ್ರಾಂತಿ ಮಾಡಿದವರು**

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಸಚಿವ ಅಭಯಚಂದ್ರ ಜೈನ್, ಜಾತೀಯತೆಯ ಪಿಡುಗನ್ನು ಶಿಕ್ಷಣದ ಮೂಲಕ ದೂರಗೊಳಿಸಿ ದಕ್ಷಿಣ ಭಾರತದಲ್ಲಿ ಸುಧಾರಣೆಯ ಕ್ರಾಂತಿ ಮಾಡಿದವರು ನಾರಾಯಣ ಗುರುವರ್ಯರು. ಅವರು ಸಮಾಜದ ಪರಿವರ್ತಕರೂ ಹೌದು. ವಿದ್ಯೆಯೇ ನಮ್ಮ ಬದುಕನ್ನು ಸಾರ್ಥಕಗೊಳಿಸುತ್ತದೆ. ಇಂದಿನ ಯುವ ಜನಾಂಗ ಅರ್ಥ ಮಾಡಿಕೊಳ್ಳಬೇಕು ಎಂದರು.

**ಗುರುಗಳ ಚಿಂತನೆ ಮೈಗೂಡಿಸಿಕೊಳ್ಳಿ**

ಮಂಗಳೂರು ವಿ.ವಿ. ಕುಲಪತಿ ಪ್ರೊ.ಜಯರಾಜ್ ಅಮೀನ್ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾರಾಯಣ ಗುರುಗಳು ಚಿಂತನೆಯನ್ನು ನಾವು ಮೈಗೂಡಿಸಿಕೊಂಡರೆ ಸಮಾಜದ ಎಲ್ಲಾ ಸಮಸ್ಯೆಗಳೂ ಪರಿಹಾರ ಕಾಣುತ್ತವೆ. ನಾರಾಯಣ ಗುರು ಅವರ ಚಿಂತನೆ ಒಂದು ಪ್ರದೇಶ, ಸೀಮಿತ ಸಮುದಾಯಕ್ಕೆ ಸೀಮಿತವಾಗದೆ, ಅವರು ಇಡೀ ಜಗತ್ತಿನ ಶ್ರೇಷ್ಠ ಸಂತರಾಗಿದ್ದಾರೆ ಎಂದರು.

ಕಾಟಿಪಳ್ಳ ನಾರಾಯಣ ಗುರು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಪಿ. ದಯಾಕರ್, ನಾರಾಯಣ ಗುರು ಪೀಠದ ಸದಸ್ಯರಾದ ವಿಜಯ ಕುಮಾರ್ ಸೊರಕೆ, ನಮಿತಾ ಶ್ಯಾಮ್, ಸಾಹಿತಿ ರಾಜಶ್ರೀ ಟಿ.ರೈ ಪೆರ್ಲ ಉಪಸ್ಥಿತರಿದ್ದರು.

ಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜಕರಾದ ಗಣೇಶ್ ಅಮೀನ್ ಸಂಕಮಾರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಯತೀಶ್ ಕುಮಾರ್ ಪ್ರಶಸ್ತಿ ಪತ್ರ ವಾಚಿಸಿದರು. ಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಕಾರ್ಯಕ್ರಮ ನಿರೂಪಿಸಿದರು.

ಮಲ್ಲಿಕಾ ಭಾನುಪ್ರಕಾಶ್ ಮತ್ತು ಬಳಗದವರಿಂದ ಸಂತಸ್ತ್ವ ಪದ ನಡೆಯಿತು.

**ಕೃತಜ್ಞನಾಗಿದ್ದೇನೆ**

ತತ್ವಜ್ಞಾನ ಅಧ್ಯಯನಕ್ಕೆ ಸಂಬಂಧಿಸಿ ಇಂದಿನ ವಿದ್ಯಾರ್ಥಿಗಳು ಆಸಕ್ತಿ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ಭಾರತೀಯ ಸಂತ ತತ್ವದ ಮಹತ್ವವನ್ನು ತಿಳಿದುಕೊಂಡು ಅರಿವಿನ ಹಾದಿಯಲ್ಲಿ ನಾವು ಮುನ್ನಡೆಯಬೇಕಾದ ಅಗತ್ಯತೆ ಇದೆ. ನನ್ನ ಕೃತಿಯನ್ನು ಓದಿ ಮನ್ನಣೆಯನ್ನು ಒದಗಿಸಿಕೊಟ್ಟಂತಹ ಮಂಗಳೂರು ವಿವಿಯ ನಾರಾಯಣ ಗುರು ಅಧ್ಯಯನ ಪೀಠಕ್ಕೆ ಕೃತಜ್ಞನಾಗಿದ್ದೇನೆ.

■ ರಾಜಶ್ರೀ ಟಿ.ರೈ ಪೆರ್ಲ, ಲೇಖಕಿ

ಗುರುವಿನ ಗುರುತು – ಅಧ್ಯಯನ ಪ್ರವಾಸ 25.10.2023- 29.10.2023

ಮಾಧ್ಯಮ ಮನ್ನಣೆ

ಹೊಸ ದಿಗಂತ
sangama2
13 Nov 2023

## ‘ಮಣ್ಣಿನೊಳಗಿನ ಅನ್ನ ವಿದ್ಯಾರ್ಥಿಗಳಿಗೊಂದು ಕೃಷಿ ಪರಿಚಯ’ ಶಿಬಿರ

# ಕೃಷಿ ಬದುಕು, ಪರಿಸರ ಜಾಗೃತಿ ಅರಿವಿರಲಿ



**ಹಳೆಯಂಗಡಿ:** ಮಂಗಳೂರು ವಿ.ವಿ. ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ ಮಂಗಳ ಗಂಗೋತ್ರಿಯ ಸಂಯೋಜನೆಯಲ್ಲಿ ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಗಳು ಹಾಗೂ ಜೂನಿಯರ್ ರೆಡ್ ಕ್ರಾಸ್ ಘಟಕ, ಸುರತ್ಕಲ್ ಗೋವಿಂದದಾಸ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಹಳೆಯಂಗಡಿ ಸಮೀಪದ ಪಾವಂಜೆಯ ನದಿ ತಟದ ನಿನಾದ ರಂಗಮಂದಿರದ ವಠಾರದಲ್ಲಿ ಕೃಷಿ ನಿನಾದ ಮಣ್ಣಿನೊಳಗಿನ ಅನ್ನ ವಿದ್ಯಾರ್ಥಿಗಳಿಗೊಂದು ಕೃಷಿ ಪರಿಚಯ ಶಿಬಿರ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಮಂಗಳೂರು ವಿ.ವಿ. ಕುಲಪತಿ ಪ್ರೊ. ಜಯರಾಜ್ ಅಮೀನ್ ಉದ್ಘಾಟಿಸಿ ಮಾತನಾಡಿ, ಇಂದಿನ ಯುವ ಜನಾಂಗಕ್ಕೆ ಹಿರಿಯರ ಕೃಷಿ ಬದುಕು ಹಾಗೂ ಪರಿಸರ ಜಾಗೃತಿ ಬಗ್ಗೆ ಅರಿವು ಮೂಡಿಸಬೇಕಾದ ಅಗತ್ಯ ಇದೆ ಎಂದರು.

ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯೋಜಕ ಡಾ. ಗಣೇಶ್ ಅಮೀನ್ ಸಂಕಮಾರ್ ಮಾತನಾಡಿ, ನಮಗೆ ಸಾಮಾಜಿಕ ಜಾಲತಾಣದ ಗೂಗಲ್ ತಂದೆ ತಾಯಿಯಲ್ಲ, ಹಿಂದಿನ ಕಾಲದ ಹಿರಿಯರೇ ನಮ್ಮ ಗೂಗಲ್ ಅವರಿಗೆ ಗೌರವ ಕೊಡುವ ಮುಖಾಂತರ ಹಿಂದಿನ ಕಾಲದ ಕೃಷಿ ಪದ್ಧತಿ ಮುಂದುವರಿಸಿ ಹೋಗುವುದು ಯುವ ಜನಾಂಗದ ಜವಾಬ್ದಾರಿ ಎಂದರು.

ಜನಪದ ವಿದ್ವಾಂಸ ಡಾ. ವೈ.ಎನ್. ಶೆಟ್ಟಿ ಯವರು ನಾರಾಯಣ ಗುರು ಮಣ್ಣಿನೊಳಗಿನ ಸತ್ವದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕೃಷಿ ಪಾಠದಲ್ಲಿ ಜನಪದ ತಜ್ಞ, ವಿಶ್ರಾಂತ ಶಿಕ್ಷಕ ಕೆ.ಕೆ. ಪೇಜಾವರ ಅವರು ಮಣ್ಣು –ಅನ್ನದೊಳಗಿನ ತುಳು ಭಾಷೆ ಬಗ್ಗೆ ಆಕೃತಿ ಆಶಯ ಪಬ್ಲಿಕೇಶನ್ ನ ಪ್ರಕಾಶಕ ಕಲ್ಲೂರು ನಾಗೇಶ್ ಬೆವರಿನ ಅರಿವು – ಅನ್ನದ ಹರಿವು ಬಗ್ಗೆ ಉಪನ್ಯಾಸ ನೀಡಿದರು.

ಕುಸುಮ ಕಡಂಬೋಡಿ ಮಹಾಬಲ ಪೂಜಾರಿ ಕಾಟಿಪಳ್ಳ ನಾರಾಯಣಗುರು ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಿ ದಯಕರ್, ಹಳೆಯಂಗಡಿಯ ಪ್ರಿಯದರ್ಶಿನಿ ಸಹಕಾರಿ ಸಂಘದ ಅಧ್ಯಕ್ಷ ವಸಂತ ಬೆರ್ನಾಡ್, ದಯಾನಂದ ನಾಯಕ್, ಸಂಯೋಜಕಿ ಜಯಂತಿ, ಕುಲ ಸಚಿವ ರಾಜು ಉಪಸ್ಥಿತರಿದ್ದರು.



**26.12.2023 ರಂದು ವಿ.ವಿ. ಸಿಂಡಿಕೇಟ್ ಸಭಾಂಗಣದಲ್ಲಿ ಜರಗಿದ ಸಲಹಾಸಮಿತಿ ಸಭೆ. ಮಾನ್ಯ ಕುಲಪತಿಗಳು ಹಾಗೂ ಸಲಹಾಸಮಿತಿ ಸದಸ್ಯರು**

**ವಿಶೇಷ ಉಪನ್ಯಾಸ: ಶ್ರೀ ಧವಲಾ ಕಾಲೇಜು, ಮೂಡುಬಿದಿರೆ 18.03.2024**




**ಶ್ರೀ ಅರವಿಂದ ಚೊಕ್ಕಾಡಿ ಇವರಿಂದ ಉಪನ್ಯಾಸ**

ಪತ್ರಿಕಾ ವರದಿ

ನಾರಾಯಣಗುರು ಪವಾಡವಲ್ಲ ಪರಿಶ್ರಮ: ವಿಚಾರ ಸಂಕಿರಣ 19.03.2024



**ನಾರಾಯಣಗುರು ಜಯಂತಿ 2024** **23.08.2024**






ಮಾನ್ಯ ಕುಲಪತಿಗಳಾದ ಪ್ರೊ. ಪಿ.ಎಲ್. ಧರ್ಮ ಹಾಗೂ ಗಣ್ಯರಿಂದ ಕಾರ್ಯಕ್ರಮದ ಉದ್ಘಾಟನೆ




ಮಾನ್ಯ ಕುಲಪತಿಗಳಾದ ಪ್ರೊ. ಪಿ.ಎಲ್. ಧರ್ಮ ಇವರಿಂದ ಅಧ್ಯಕ್ಷ ಭಾಷಣ




ಶ್ರೀ ಬಿ.ಕೆ. ಹರಿಪ್ರಸಾದ್ ಇವರಿಂದ ಉಪನ್ಯಾಸ



# ಇಂದು ನಾರಾಯಣ ಗುರು ಜಯಂತಿ

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ (ಮಂಗಳಗಂಗೋತ್ರಿ) ಸಹಭಾಗಿತ್ವದೊಂದಿಗೆ ನಾರಾಯಣ ಗುರು ಜಯಂತಿ ಕಾರ್ಯಕ್ರಮ ಆ.23ರಂದು ಬೆಳಗ್ಗೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆಯಲಿದೆ. ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಶಾಸಕ ವೇದವ್ಯಾಸ ಕಾಮತ್, ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಉಪಸ್ಥಿತರಿರುವರು ಎಂದು ವಿಶ್ವವಿದ್ಯಾಲಯ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಪತ್ರಿಕಾ ತುಣುಕು




**You Tube Link:** https://youtu.be/ezPNDube7JI




ಶ್ರೀ ಮುದ್ದು ಮೂಡುಬೆಳ್ಳೆ ಇವರಿಂದ ಉಪನ್ಯಾಸ